## 2009–10ನೇ ಸಾಲಿನ ಕನ್ನಡ ವಿಶ್ವವಿದ್ಯಾಲಯ ಹಂಪಿ ವಿದ್ಯಾರಣ್ಯ ಹೊಸಪೇಟೆ(ತಾ) ಬಳ್ಳಾರಿ(ಜಿ)
## ಲೆಕ್ಕ ತನಿಖೆಯಲ್ಲಿ ಕಂಡು ಬಂದ ಪ್ರಮುಖ ನ್ಯೂನತೆಗಳ ವಿವರಣಾ ಪಟ್ಟಿ

| ಕ್ರ.ಸಂ. | ಕಂಡಿಕೆ | ಮುಖ್ಯ ಲೋಪದೋಷಗಳ ವಿವರಗಳು |
|---|---|---|
| 1 | 5 | ಹಿಂದಿನ ಸಾಲಿನ ಲೆಕ್ಕ ತನಿಖಾ ವರದಿಗಳಿಗೆ ಅನುಪಾಲನಾ ವರದಿ ಸಲ್ಲಿಸದೇ ಇರುವುದು |
| 2 | 9(ಎ) | ವಾರ್ಷಿಕ ಲೆಕ್ಕ ಪತ್ರಗಳು ಸಾಮಾನ್ಯ ನಗದು ಪುಸ್ತಕಕ್ಕೆ ಹೊಂದಾಣಿಕೆ ಯಾಗದೇ ಇರುವುದು ಹೊಂದಾಣಿಕ ಮಾಡಿಪರಿಷ್ಕೃತ ವಾರ್ಷಿಕ ಲೆಕ್ಕ ಪತ್ರಗಳು ಮಡುವುದು |
| 3 | 14 | ಗುತ್ತಿಗೆದಾರರ ಠೇವಣಿ ರಿಜಿಸ್ಟ್ರಾರ್‌ನ್ನು ಹಾಜರುಪಡಿಸದೇ ಇರುವುದು |
| 4 | 16 | ಸರ್ಕಾರದ ಪುರ್ವಾನುಮತಿಯಿಲ್ಲದೇ ಅಡವಿಟ್ಟು ಸಾಲ ಪಡೆದಿರುವುದು |
| 5 | 17 | ಮುಂಗಡಗಳು ಹೊಂದಾಣಿಕೆ ಮಾಡದೇ ಇರುವುದು |
| 6 | 23 | ನಗದು ಪುಸ್ತಕ ನಿರ್ವಹಣೆಯನ್ನು ಸಮರ್ಪಕ ರೀತಿಯಲ್ಲಿ ನಿರ್ವಹಿಸದೇ ಇರುವುದು |
| 7 | 26 | ವಿಶ್ವವಿದ್ಯಾಲಯದ ಆಡಳಿತಾತ್ಮಕ ಮತ್ತು ಆರ್ಥಿಕ ಅಧಿಕಾರಗಳ ಚಲಾಯಿಸುವಲ್ಲಿ ನಿರ್ದಿಷ್ಟ ಅಧಿಕಾರ ಸೂಚಿಸದೇ ಇರುವ ಬಗ್ಗೆ |
| 8 | 27 | ಹಿರಿಯ ಹಾಗೂ ಕಿರಿಯ ನೌಕರರ ವೇತನ ವ್ಯತ್ಯಾಸ ಸರಿಪಡಿಸುವಲ್ಲಿ ಸಂಪೂರ್ಣ ಸೇವಾ ವಿವರಗಳು ದಾಖಲಿಸದೇ ಇರುವುದು |
| 9 | 31 | ಶ್ರೀ ರಾಮಮೂರ್ತಿ, ಮುಖ್ಯಗ್ರಂಥಪಾಲಕರ ನಿವೃತ್ತಿ ಸೌಲಭ್ಯಗಳನ್ನು ನಿಯಮ ಬಹಿರವಾಗಿ ಇತ್ಯರ್ಥಪಡಿಸಿರುವ ಬಗ್ಗೆ |
| 10 | 32 | ನಿರುಪಯುಕ್ತ ವಹಿ ಹಾಜರುಪಡಿಸದೇ ಇರುವುದು. |

**ಸಹಾಯಕ ನಿಯಂತ್ರಕರು**
ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ
**ಬಳ್ಳಾರಿ**



PDF created with pdfFactory trial version www.pdffactory.com

## ಬಳ್ಳಾರಿ(ಜಿ) ಹೊಸಪೇಟೆ(ತಾ) ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ಇವರ 2009–10ನೇ ಸಾಲಿನ ಲೆಕ್ಕ ತಪಾಸಣಾ ವರದಿಯಲ್ಲಿನ ಆಕ್ಷೇಪಣೆ ಮತ್ತು ವಸೂಲಾತಿ ಸೂಚಿಸಿದ ವಿವರಗಳು

| ಕ್ರ.ಸಂ. | ಕಂಡಿಕೆ ಸಂಖ್ಯೆ | ಮುಖ್ಯ ಲೋಪದೋಷಗಳ ವಿವರಗಳು | ಆಕ್ಷೇಪಣೆ ಮೊತ್ತ | ವಸೂಲಾತಿ ಮೊತ್ತ |
|---|---|---|---|---|
| 1 | 18 | ಭೂಸೇನಾ ನಿಗಮ ಇವರಿಗೆ ಅಕ್ಷರ ಗ್ರಂಥಾಲಯದ ಓಪನ ಟೆರಸ್ಸೆ ಟ್ರೈಸ್ ಹಾಕಿ ಶೀಟ್ ಅಳವಡಿಸುವ ಕಾಮಗಾರಿ ಬಗ್ಗೆ | 1210000 | -- |
| 2 | 20 | ರಸೀದಿಯನ್ವಯ ಹಣ ಕಡಿಮೆ ಜಮಾ | | 2820 |
| 3 | 19 | ಕಾಮಗಾರಿ ಬಿಲ್ಲುಗಳಲ್ಲಿ ಕಾರ್ಮಿಕ ಕಲ್ಯಾಣ ಸುಂಕ ಹಾಗೂ | | 10436 |
| | 19(ಎ) | ಆದಾಯ ತೆರಿಗೆ ಕಡಿತ ಮಾಡದೇ ಇರುವ ಬಗ್ಗೆ | | 10667 |
| | | | | **21103** |
| 4 | 22 | ಇಂಧನ ವೆಚ್ಚದ ಬಗ್ಗೆ | 613272 | -- |
| 5 | 24 | ಕನ್ನಡ ವಿಶ್ವವಿದ್ಯಾಲಯ(ಹಂಪಿ) ಮೂಲಕ ಖರೀದಿಸಿರುವ ಸಾಮಗ್ರಿಗಳಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಪಾಲಿಸದೇ ಇರುವುದು | 2462698 | |
| 6 | 25 | ಕನ್ನಡ ವಿಶ್ವವಿದ್ಯಾಲಯ(ಹಂಪಿ) ವಿವಿಧ ಖರ್ಚುಗಳು ಭರಿಸುವ ಸಂಬಂಧ ಮುಂಗಡ ನೀಡಿರುವ ಬಗ್ಗೆ | 13942145 | -- |
| 7 | 28 | ವೇತನ ಪುನರ್ ನಿಗದಿಪಡಿಸಿದ ಬಗ್ಗೆ(ಶ್ರೀ ಮಹೇಶ್ ಉಣಕಲ್ಲು, ಕಾಶಿ ವಿಶ್ವನಾಥ್, ಈ.ಟಿ.ನಾಗರಾಜ, ಶ್ರೀನಿವಾಸ ಹೆಚ್.) | 20826 | -- |
| 8 | 29 | ವೇತನ ಪುನರ್ ನಿಗದಿಪಡಿಸಿದ ಬಗ್ಗೆ (ಶ್ರೀಮತಿ ಡಿ.ಪ್ರಭಾ, ಶ್ರೀ ಈ.ಟಿ. ನಾಗರಾಜ್, ಶ್ರೀನಿವಾಸ ಹೆಚ್.) | 54362 | -- |
| 9 | 30 | ಹಿರಿಯ ಸಹಾಯಕರಿಗೆ 1999 ಪರಿಷ್ಕೃತ ವೇತನ ಶ್ರೇಣಿಯಲ್ಲಿ ವೇತನ ಪುನರ್ ನಿಗದಿಪಡಿಸಿದ ಬಗ್ಗೆ | 113126 | -- |
| | | ಒಟ್ಟು | **19222703** | **23923** |

**ಸಹಾಯಕ ನಿಯಂತ್ರಕರು**
ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ
**ಬಳ್ಳಾರಿ**



PDF created with pdfFactory trial version www.pdffactory.com

# ಕನ್ನಡ ವಿಶ್ವವಿದ್ಯಾಲಯ, ಹಂಪಿ
## ವಿದ್ಯಾರಣ್ಯ 583 276
## 2009–10ನೇ ಸಾಲಿನ ಲೆಕ್ಕ ತನಿಖಾ ವರದಿ

**ಭಾಗ 1**

| ಕ್ರ. ಸಂ. | ಆಕ್ಷೇಪಣೆ | ಉತ್ತರ | ದಾಖಲೆ | ಷರಾ |
|---|---|---|---|---|
| 1. | **ಪೀಠಿಕೆ**<br>ಕನ್ನಡ ವಿಶ್ವವಿದ್ಯಾಲಯ, ಹಂಪಿ ಇವರ 2009–10ನೇ ಸಾಲಿನ ಲೆಕ್ಕ ತನಿಖೆಯನ್ನು ಕನ್ನಡ ವಿಶ್ವವಿದ್ಯಾಲಯದ ಅಧಿನಿಯಮ 1991ರ ಸೆಕ್ಷನ್ 26 ಮತ್ತು ಸರ್ಕಾರಿ ಆದೇಶ ಸಂ.ಇಡಿ/84/ಎಂ.ಎಸ್.ಡಿ/93, ದಿನಾಂಕ 01–06–1993 ಮತ್ತು ಸರ್ಕಾರಿ ಆದೇಶ ಸಂಖ್ಯೆ ಇಡಿಯುಪಿ 97, ದಿನಾಂಕ 19–03–1997ರನ್ವಯ ಕೈಗೊಂಡ ಲೆಕ್ಕ ತನಿಖಾ ವರದಿಯನ್ನು ಸೂಕ್ತ ಕ್ರಮಕ್ಕಾಗಿ ವಿಶ್ವವಿದ್ಯಲಯಕ್ಕೆ ಕಳುಹಿಸಿ ಕೊಡಲಾಗಿದೆ. | – | | |
| 2. | **ಸಾಮಾನ್ಯ ಮಾಹಿತಿ**<br>**1. ಸಂಸ್ಥೆಯ ಹೆಸರು:** ಕನ್ನಡ ವಿಶ್ವವಿದ್ಯಾಲಯ, ಹಂಪಿ<br>**2. ಲೆಕ್ಕ ಪರಿಶೋಧನಾ ಅವಧಿ:** 2009–10<br>**3. ಲೆಕ್ಕ ಪರಿಶೋಧನಾ ತಂಡ :** 1. ಶ್ರೀ ಅಬ್ದುಲ್ ಸತ್ತಾರ್, ಲೆಕ್ಕ ಪರಿಶೋಧನಾಧಿಕಾರಿ<br>2. ಶ್ರೀಪಿ.ವಿ.ಭೀಮಸೇನಾಚಾರ್ಯ, ಲೆಕ್ಕ ಪರಿಶೋಧಕರು<br>3. ಶ್ರೀ ವಿ.ಕೆ.ತಬ್ಬಣ್ಣ, ಲೆಕ್ಕ ಪರಿಶೋಧಕರು | – | | |



PDF created with pdfFactory trial version www.pdffactory.com

| | | | | |
|---|---|---|---|---|
| | 4. ಶ್ರೀ ರೇವಣಸಿದ್ದಯ್ಯ, ಲೆಕ್ಕ ಪರಿಶೋಧಕರು<br>5. ಶ್ರೀ ಎಲ್.ಲಕ್ಷ್ಮಣ, ಲೆಕ್ಕ ಪರಿಶೋಧಕರು<br>6. ಶ್ರೀ ಬಾಬು, ಲೆಕ್ಕ ಪರಿಶೋಧಕರು<br>**4. ಲೆಕ್ಕಪರಿಶೋಧನೆ ಪ್ರಾರಂಭದ ದಿನಾಂಕ : ** 06–09–2010<br>5. ಲೆಕ್ಕ ಪರಿಶೋಧನೆ ಮುಕ್ತಾಯ ದಿನಾಂಕ : 29–10–2010<br>6. ಲೆಕ್ಕ ಪರಿಶೋಧನೆಗೆ ತೆಗೆದುಕೊಂಡ ದಿನಾಂಕ : ಏಕ ಮಾನವ ದಿನಗಳು 150<br>**7. ಪುನರ್ ಪರಿಶೀಲಿಸಿದ ಅಧಿಕಾರಿ :** ಶ್ರೀ ಎಲ್.ಛತ್ರನಾಯ್ಕ, ಸಹಾಯಕ ನಿಯಂತ್ರಕರು ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ, ಬಳ್ಳಾರಿ<br>**8. ಪುನರ ಪರಿಶೀಲಿಸಿದ ದಿನಾಂಕ :** 30–09–2011 | | | |
| 3. | **ಸಂಸ್ಥೆಯ ಆಡಳಿತ ವರ್ಗ ಮತ್ತು ಕಲಾವಧಿ :**<br>**1. ಮಾನ್ಯ ಕುಲಪತಿಗಳು :** ಡಾ.ಎ.ಮುರಿಗೆಪ್ಪ: 01–04–2009 ರಿಂದ 31–03–2010<br>**2. ಮಾನ್ಯ ಕುಲಸಚಿವರು:**<br>1. ಶ್ರೀ ಎಸ್.ಎಸ್.ಪೂಜಾರ್ 01–01–2009 ರಿಂದ 17–11–2009<br>2. ಡಾ.ಮಂಜುನಾಥ ಬೇವಿನಕಟ್ಟಿ: 18–11–2009 ರಿಂದ 31–03–2010<br>3.. **ಹಣಕಾಸು ಅಧಿಕಾರಿಗಳು:**<br>1. ಶ್ರೀರಮೇಶ ನಾಯ್ಕ04–07–2007 ರಿಂದ 25–06–2009 | – | | |



PDF created with pdfFactory trial version www.pdffactory.com

| | | | | |
|---|---|---|---|---|
| | 2. ಡಾ.ಟಿ.ಪಿ.ವಿಜಯ್:26–06–2009 ರಿಂದ 30–09–2009<br>3. ಶ್ರೀ ಗುರುಲಿಂಗಪ್ಪ ಹೊಸಮನಿ01–10–2009 ರಿಂದ 31–03–2010<br>**4. ನಿರ್ದೇಶಕರು ಪ್ರಸಾರಾಂಗ:**<br>1. ಡಾ. ಎ.ಮೋಹನ ಕುಂಟಾರ್01–12–2008 ರಿಂದ 31–03–2010<br>**5. ನಿರ್ದೇಶಕರು ಅಧ್ಯಯನಾಂಗ :**<br>1. ಡಾ. ಪಾಂಡುರಂಗ ಬಾಬು: 16–07–2007 ರಿಂದ 19–06–2009<br>2. ಡಾ. ಪಾಂಡುರಂಗ ಬಾಬು: 25–06–2009 ರಿಂದ 31–03–2010<br>**6. ಮುಖ್ಯಗ್ರಂಥಪಾಲಕರು :**<br>1. ಡಾ.ಕೆ.ಎ.ರಾಧಕೃಷ್ಣ: 01–04–2009 ರಿಂದ 31–03–2010 | | | |
| 4. | **ಕನ್ನಡ ವಿಶ್ವವಿದ್ಯಾಲಯದ ಉದ್ದೇಶ**<br>ಕರ್ನಾಟಕ ಸರ್ಕಾರದ 1991ರ ಅಧಿನಿಯಮ ಸಂಖ್ಯೆ 335ರ ಅಡಿಯಲ್ಲಿ ಕನ್ನಡ ವಿಶ್ವವಿದ್ಯಾಲಯವು ಸ್ಥಾಪನೆಯಾಗಿದೆ ಕನ್ನಡ ಭಾಷೆ ಮತ್ತು ಸಾಹಿತ್ಯದಲ್ಲಿ ಜ್ಞಾಪನವನ್ನು ವೃದ್ಧಿಪಡಿಸಲು ಸಂಶೋಧನೆಯನ್ನು ಮುಂದುವರೆಸಲು ಮತ್ತು ಸಾಂಸ್ಕೃತಿಕ ಅವಶ್ಯಕತೆಯನ್ನು ಪೂರೈಸಲು ಈ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಗಿದೆ.<br>ಪರಿನಿಯಮದ ಅಧ್ಯಾಯ–2 ಪ್ರಕರಣ 4ರಲ್ಲಿ ಕನ್ನಡ ವಿಶ್ವವಿದ್ಯಾಲಯವು ಹೊಂದಿರುವ ಉದ್ದೇಶಗಗಳನ್ನು ವಿವರವಾಗಿ ತಿಳಿಸಲಾಗಿದೆ. ಕನ್ನಡ ವಿಶ್ವವಿದ್ಯಾಲಯವು ದಿನಾಂಕ 01–011–1991ರಿಂದ ಅಸ್ತಿತ್ವಕ್ಕೆ ಬಂದಿರುತ್ತದೆ. 2009–10ನೇ ಸಾಲಿನಲ್ಲಿ ಯು.ಜಿ.ಸಿ.ರಾಜ್ಯ ಸರ್ಕಾರದ ಮತ್ತು ಇತರೆ ಸಂಸ್ಥೆಗಳಿಂದ ಬಂದ ಅನುದಾನದಿಂದ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. | – | | |



PDF created with pdfFactory trial version www.pdffactory.com

<table>
<tr>
<td>5.</td>
<td>ಹಿಂದಿನ ಸಾಲಿನ ತನಿಖಾ ವರದಿಗಳ ಕಂಡಿಕೆ ವಿಲೇವಾರಿ ಬಗ್ಗೆ<br><br>ಕನ್ನಡ ವಿಶ್ವವಿದ್ಯಾಲಯ, ಹಂಪಿ ಇದರ 1991–92 ರಿಂದ 2008–2009ನೆ ಸಾಲಿನವರೆಗೆ ಲೆಕ್ಕ ತನಿಖಾ ವರದಿಗಳಲ್ಲಿ ಸೂಚಿಸಲಾದ ಆಕ್ಷೇಪಣೆ ಮತ್ತು ವಸೂಲಾತಿ ಮೊತ್ತಗಳು ಈ ಕೆಳಗಿನಂತೆ ಇರುತ್ತದೆ.<br><br>1. ಆಕ್ಷೇಪಣೆ ಕಂಡಿಕೆ 430 ಮೊತ್ತ ರೂ.236778102–00<br><br>2. ವಸೂಲಾತಿ ಕಂಡಿಕೆ 373 ಮೊತ್ತ ರೂ.25390907–00<br><br>ವಿವರಗಳು ಅನುಬಂಧ(1)ರಲ್ಲಿ ಲಗತ್ತಿಸಲಾಗಿದೆ.</td>
<td>ಹಿಂದಿನ ಸಾಲಿನ ಲೆಕ್ಕ ತನಿಖಾ ವರದಿಯ ಬಾಕಿ ಉಳಿದ ಕಂಡಿಕೆಗಳಿಗೆ ಅನುಪಾಲನಾ ವರದಿ ತಯಾರಿಸಿ ಇತ್ಯಾರ್ಥಪಡಿಸಲು ನಿಯಂತ್ರಕರು ರಾಜ್ಯ ಲೆಕ್ಕ ಪತ್ರ ಇಲಾಖೆ ಬೆಂಗಳೂರು ಹಾಗೂ ಸಹಾಯಕ ನಿಯಂತ್ರಕರು ಸ್ಥಳೀಯ ಲೆಕ್ಕ ಪತ್ರ ವರ್ತುಲ, ಬಳ್ಳಾರಿ ಇವರಿಗೆ ಸಲ್ಲಿಸಲಾಗಿದೆ.<br><br>ದಿನಾಂಕ:14.03.2012ರಂದು ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಕೈಗೊಂಡ ಸಭೆಯಲ್ಲಿ ಅಪರ ನಿಯಂತ್ರಕರು ರಾಜ್ಯ ಲೆಕ್ಕ ಪತ್ರ ಇಲಾಖೆ ಬೆಂಗಳೂರು ಇವರು ಸೂಚಿಸಿದ್ದಂತೆ ಅಡಹಾಕ ಸಲಹಾ ಸಮಿತಿ ಸಭೆಯಲ್ಲಿ ಚರ್ಚಿಸಿ ಬಾಕಿ ಉಳಿದ ಕಂಡಿಕೆಗಳನ್ನು ಇತ್ಯರ್ಥ ಪಡಿಸಿಕೊಳ್ಳಲು ತಿಳಿಸಿರುತ್ತಾರೆ. ಕಾರಣ ಸೂಕ್ತ ಕ್ರಮಕೈಕೊಳ್ಳಲಾಗುವುದು.</td>
<td></td>
<td></td>
</tr>
<tr>
<td>6.</td>
<td>ಆಯವ್ಯಯ<br><br>2009–10ನೇ ಸಾಲಿನ ಆಯವ್ಯಯ ದಿನಾಂಕ 24–11–2009ರಂದು ನಡೆದ ಕನ್ನಡ ವಿಶ್ವವಿದ್ಯಾಲಯದ ಹಣಕಾಸು ಸಮಿತಿ ಸಭೆಯಲ್ಲಿ ಅನುಮೋದಿಸಲಾಗಿದೆ ಮತ್ತು 2009–10ನೇ ವರ್ಷದ ಪರಿಷ್ಕೃತ ಅಯವ್ಯಯವನ್ನು ದಿನಾಂಕ 28–01–2010ರಂದು ನಡೆದ ಕನ್ನಡ ವಿಶ್ವವಿದ್ಯಾಲಯದ ಮೂರನೆ ಹಣಕಾಸು ಸಮಿತಿಯಲ್ಲಿ ಅನುಮೋದಿಸಲಾಗಿದೆ.<br><br>
<table>
<tr><th>ಕ್ರ.ಸಂ.</th><th>ವಿವರಗಳು</th><th colspan="2">ಆಯವ್ಯಯ</th><th colspan="2">ಪರಿಷ್ಕೃತ ಆಯವ್ಯಯ</th></tr>
<tr><th></th><th></th><th>ಆದಾಯ</th><th>ಖರ್ಚು</th><th>ಆದಾಯ</th><th>ಖರ್ಚು</th></tr>
<tr><td>1</td><td>ಯೋಜನೇತರ</td><td>1013.94</td><td>1013.94</td><td>549.16</td><td>534.14</td></tr>
</table>
</td>
<td>ಋಣ ಶೀರ್ಷಿಕೆ ಅಡಿಯಲ್ಲಿ ಆದಾಯಕ್ಕಿಂತ ವೆಚ್ಚಗಳು ಹೆಚ್ಚಳವಿದೆ. ಬಾಕಿ ಇದ್ದ ಸಾಲಗಳ ಮರುಪಾವತಿ ಮತ್ತು ಬಾಕಿ ಇದ್ದ ಪಿಂಚಣಿ ವಂತಿಗೆ ಮರುಪಾವತಿಸಿದೆ. ನಿರ್ದೇಶನದಂತೆ ಇನ್ನು ಮುಂದೆ Balance Budget ತಯಾರಿಸಲಾಗುವುದು.</td>
<td></td>
<td></td>
</tr>
</table>



PDF created with pdfFactory trial version www.pdffactory.com

| | | | | |
|---|---|---|---|---|
| | 2 ಯೋಜನೆ 961.70 965.11 962.67 952.57<br>3 ಋಣಶೀರ್ಷಿಕೆ 64.30 63.30 12.62 60.88<br>**ಒಟ್ಟು 2039.94 2042.35 1524.45 1547.59**<br>ಆದಾಯಕ್ಕಿಂತ ಹೆಚ್ಚಿಗೆಯಾದ ಮೊತ್ತ 2.41 23.14<br>ಮೇಲಿನ ಆಯವ್ಯಯದಡಿ ವಿವರಗಳನ್ನು ಪರಿಶೀಲಿಸಲಾಗಿದ್ದು ಆದಾಯಕ್ಕಿಂತ ಖರ್ಚು ಹೆಚ್ಚಿಗೆ ನಿಗದಿಸಿದ್ದು, Deficit Budgetಯಾಗಿ ತಯಾರಿಸಲಾಗಿದೆ. ಮುಂದೆ Deficit Budget ಮಾಡಲು ಕೈಬಿಟ್ಟು Balance Budget ಯನ್ನು ತಯಾರಿಸಲು ಸೂಚಿಸಲಾಗಿದೆ. | | | |
| 7. | **ನಗದು ಹಣದ ಭೌತಿಕ ಪರಿಶೀಲನೆ**<br>ಕನ್ನಡ ವಿಶ್ವವಿದ್ಯಾಲಯದ 2009–10ನೇ ಸಾಲಿನ ಲೆಕ್ಕ ತನಿಖೆಯ ಪ್ರಾರಂಭದ ದಿನಾಂಕ 06–09–2010ರಂದು ನಗದು ಹಣವನ್ನು ಭೌತಿಕವಾಗಿ ಪರಿಶೀಲಿಸಲಾಗಿ ರೂ.16,500–00ಗಳು ಇದ್ದು ನಗದು ಪುಸ್ತಕ ಅಂತ್ಯ ಶಿಲ್ಕುನೊಂದಿಗೆ ತಾಳೆ ಹೊಂದಿರುತ್ತದೆ. | – | | |
| 8. | **ಅಂಚೆ ಚೀಟಿಗಳ ಭೌತಿಕ ಪರಿಶೀಲನೆ**<br>ಕನ್ನಡ ವಿಶ್ವವಿದ್ಯಾಲಯದ 2009–10ನೇ ಸಾಲಿನ ಲೆಕ್ಕ ತನಿಖೆಯ ಪ್ರಾರಂಭದ ದಿನಾಂಕ 07–09–2010ರಂದು ಅಂಚೆ ಚೀಟಿಗೆ ಸಂಬಂಧಿಸಿದ ಪ್ರಾಕಿಂಗ್ ಮಿಷನ್‌ಗಳ ಅಂತ್ಯ ಶಿಲ್ಕು 20223–00ಗಳು ಇರುತ್ತದೆ. | – | | |
| 9. | **ಹಣಕಾಸಿನ ಪರಿಸ್ಥಿತಿ**<br>ಕನ್ನಡ ವಿಶ್ವವಿದ್ಯಾಲಯ, ಹಂಪಿಯ 2009–10ನೇ ಸಾಲಿನ ವಿವಿಧ ನಗದು ಪುಸ್ತಕಗಳ ಪರಿಸ್ಥಿತಿ ಈ ಕೆಳಗಿನಂತಿದೆ(ಸಾಮಾನ್ಯ ನಗದು ಪುಸ್ತಕ ಹೊರತುಪಡಿಸಿ) ವಿವರಗಳು ಅನುಬಂಧ–3ರಲ್ಲಿ ಲಗತ್ತಿಸಿದೆ. | – | | |



PDF created with pdfFactory trial version www.pdffactory.com

1 01–04–09ರಂದು ಪ್ರಾರಂಭ ಶಿಲ್ಕು :60154234.61

2 2009–10ನೇ ಸಾಲಿನ ಜಮಾಗಳು : 133911985.23

ಒಟ್ಟು 194066219.84

3 2009–10ನೇ ಸಾಲಿನ ಖರ್ಚುಗಳು: 126868453.08

4 31–03–2010ರಂದು ಅಂತ್ಯ ಶಿಲ್ಕು: 67197766.76

**ಕೂಡಿಸಿರಿ**

1 ನಗದಾಗದೇ ಇರುವ ಚೆಕ್ಕುಗಳು : 4758824 (ಅನುಬಂಧ–03(ಎ)

**ಕಳಿಯಿರಿ**

1. ಸ್ವೀಕೃತಿ ಜಮಾಯಾಗದೆ ಇರುವ ಮೊತ್ತ 536102 (ಅನುಬಂಧ–3(ಎ)
2. ಸಾವಧಿ ಠೇವಣಿ ರೂಪದಲ್ಲಿ ಇದ್ದ ಮೊತ್ತ 29453457.63 (ಅನುಬಂಧ–3(ಬಿ)

**ವ್ಯತ್ಯಾಸದ ಮೊತ್ತ** (–) **25230735.63**

**25230735.63**

**31–03–2010ರಂದು ಬ್ಯಾಂಕ್ ಖಾತೆಗಳಲ್ಲಿದ್ದ ಅಂತಿಮ ಶಿಲ್ಕು** 41967031.13

2009–10ನೇ ಸಾಲಿನ ನಗದಾಗದೇ ಇದ್ದ ಚೆಕ್ಕುಗಳ ಮೊತ್ತವನ್ನು ತೋರಿಸುವ ವಿವರಣಾ ಪಟ್ಟಿಯನ್ನು ಅನುಬಂಧ–3(ಎ)ರಲ್ಲಿಯೂ ಸ್ವೀಕೃತಿ ಜಮಾಯಾದೆ ಇರುವ ಮೊತ್ತವನ್ನು ತೋರಿಸುವ ವಿವರಣಾ ಪಟ್ಟಿಯನ್ನು ಅನುಬಂಧ 3(ಎ)ಯಲ್ಲಿಯೂ ಮತ್ತು ಸಾವಧಿ ಠೇವಣಿಗಳ ಮೊತ್ತವನ್ನು ಅನುಬಂಧ 3(ಬಿ)ಯಲ್ಲಿಯು ತೋರಿಸಲಾಗಿದೆ.

ಸಾಮಾನ್ಯ ನಗದು ಪುಸ್ತಕದಲ್ಲಿ ಜಮೆ ಮತ್ತು ವೆಚ್ಚಗಳನ್ನು ದಾಖಲಿಸಿ ದೃಢೀಕರಿಸಿದೆ. 2009–10ನೇ ಸಾಲಿಗಾಗಿ ಸರಕಾರದಿಂದ ಈ ಕೆಳಗಿನಂತೆ ಅನುದಾನ ಬಿಡುಗಡೆಯಾಗಿದೆ.

| | |
|---|---|
| ವೇತನಕ್ಕಾಗಿ ಯೋಜನೇತರ ಅಡಿ | ರೂ.44516000–00 |
| ಯೋಜನೆ ಅಡಿ ಅಭಿವೃದ್ಧಿ ಕಾರ್ಯಗಳಿಗಾಗಿ | ರೂ.30000000–00 |
| ಹಾಲುಮತ ಅಧ್ಯಯನ ಪೀಠಕ್ಕಾಗಿ | ರೂ.5.00000–00 |
| ಒಟ್ಟು ಮೊತ್ತ | **ರೂ**.75016000–00 |



PDF created with pdfFactory trial version www.pdffactory.com

<table>
<tr>
<td></td>
<td>ಮೇಲ್ಕಾಣಿಸಿದಂತೆ ನಗದು ಪುಸ್ತಕಗಳ ಅಂತ್ಯ ಶಿಲ್ಕುಗಳು ಬ್ಯಾಂಕ್ ಖಾತೆಗಳ ಅಂತ್ಯ ಶಿಲ್ಕುದೊಂದಿಗೆ ತಾಳೆ ಮಾಡಿ ಸಮನ್ವಯಗೊಳಿಸಲಾಗಿದೆ.<br><br>ವಿಚಾರಣೆ 15/27–10–2010ರಲ್ಲಿ ಸಾಮಾನ್ಯ ನಗದು ಪುಸ್ತಕದ 2009–10ನೇ ಸಾಲಿನ ವ್ಯವಹಾರಗಳಾದ ಜಮಾ ಮತ್ತು ಖರ್ಚುಗಳ(ಜಮಾ 75016000 ಮತ್ತು ಖರ್ಚು 48690108)ಗಳ ಸ್ಪಷ್ಟ ವಿವರಗಳು ಲಭ್ಯವಾಗಿಲ್ಲ. ಇದರ ಬಗ್ಗೆ ಸೂಕ್ತ ವಿವರಗಳನ್ನು ದಾಖಲಿಸಿ ದೃಢೀಕರಿಸಿ ಹಾಜರುಪಡಿಸಲು ಸೂಚಿಸಿದೆ.</td>
<td>ಬಿಡುಗಡೆಯಾದ ಅನುದಾನವನ್ನು , ಸಾಮಾನು ಖಾತೆಗೆ ಜಮೆ ತೆಗೆದುಕೊಂಡ ನಂತರ ಆಯಾ ಲೆಕ್ಕ ಶೀರ್ಷಿಕೆವಾರು ವರ್ಗಾಯಿಸಿ ಸಂಬಂಧಿಸಿದ ಬ್ಯಾಂಕ್ ಖಾತೆಗಳ ಮೂಲಕ ಹಣಕಾಸಿನ ವ್ಯವಹಾರ ನಿರ್ವಹಿಸಲಾಗಿದೆ. ಜಮ ಮತ್ತು ವೆಚ್ಚಕ್ಕೆ ಸಂಬಂಧಿಸಿದಂತೆ ರೂ.48690108/–ಗಳಿಗೆ ಓಚರ್‌ಗಳು ಲಭ್ಯವಿದ್ದು, ಲೆಕ್ಕ ತನಿಖಾ ಸಮುಯದಲ್ಲಿ ಹಾಜರಪಡಿಸಿದೆ. ಹಾಗೂ ಈ ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದಂತೆ ಪ್ರತಿ ತ್ರೈಮಾಸಿಕ ಅವಧಿಯ ಹಣಕಾಸು ಸಮಿತಿ ಸಭೆಯಲ್ಲಿ ಜಮ ಮತ್ತು ವೆಚ್ಚಗಳಿಗೆ ಅನುಮೋದನೆ ಪಡೆಯಲಾಗಿದೆ. ಹಾಗೂ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಅನುಮೋದನೆ ಪಡೆಯಾಲಾಗಿದೆ.<br><br>.</td>
<td></td>
<td></td>
</tr>
<tr>
<td>9ಎ</td>
<td>ಹಣಕಾಸಿನ ಪರಿಸ್ಥಿತಿ(ಸಾಮಾನ್ಯನಗದು ಪುಸ್ತಕದ ಬಗ್ಗೆ
<table>
<tr><th>ಕ್ರ ಸಂ</th><th>ವಿವರಗಳು</th><th>2009–10ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳ ಪ್ರಕಾರ</th><th>2009–10ನೇ ಸಾಲಿನ ವಿವಿಧ ನಗದು ಪುಸ್ತಕಗಳ ಪ್ರಕಾರ</th><th>2009–10ನೇ ಸಾಲಿನ ಸಾಮಾನ್ಯ ನಗದು ಪುಸ್ತಕದಲ್ಲಿ ಇರಬೇಕಾದದ್ದು.</th></tr>
<tr><td>1.</td><td>01–04–2009 ಆರಂಭದ ಶಿಲ್ಕು</td><td>66918075–73</td><td>60154234–61</td><td>6763841–12</td></tr>
<tr><td>2.</td><td>2009–10ರ ಜಮಾಗಳು</td><td>109883259–37</td><td>133911985–23</td><td>(–)24028725–86</td></tr>
<tr><td></td><td>ಒಟ್ಟು</td><td>1768011335–10</td><td>126868453–08</td><td>(–)17264884–74</td></tr>
<tr><td>3</td><td>ಖರ್ಚುಗಳು</td><td>136334776–00</td><td>126868453–08</td><td>486901–08</td></tr>
<tr><td>4</td><td>ಅಂತ್ಯಶಿಲ್ಕು</td><td>40466559–10</td><td>67197766–76</td><td>(–)65954992–74</td></tr>
</table>
ಮೇಲಿನ ವಿವರಗಳ ಪ್ರಕಾರ 2009–10ನೇ ಸಾಲಿನ ಸಾಮಾನ್ಯ ನಗದು ಪುಸ್ತಕಗದ ವಿವರಗಳನ್ನು ಸೂಕ್ತ ಹೊಂದಾಣಿಕೆ ಮಾಡಿ ಸರಿಪಡಿಸಿ ಪರಿಷ್ಕೃತ ವಾರ್ಷಿಕ ಲೆಕ್ಕ ಪತ್ರಗಳನ್ನು ತಯಾರಿ ಅನುಮೋದನೆ ಪಡೆದು ಮುಂದಿನ ತನಿಖೆಯಲ್ಲಿ ಹಾಜರುಪಡಿಸಲು ಸೂಚಿಸಿದೆ.</td>
<td>2009–10ನೇ ಸಾಲಿನ ಸಾಮಾನ್ಯ ನಗದು ಪುಸ್ತಕವನ್ನು ಸರಿಪಡಿಸಿದೆ ಮುಂದಿನ ಲೆಕ್ಕ ತನಿಖೆಗೆ ಹಾಜರಪಡಿಸಲಾಗುವುದು.<br><br>ಸರಕಾರದಿಂದ ಸ್ವೀಕೃತಿಯಾಗುವ ಅನುದಾನಗಳು ಬ್ಯಾಂಕ್ ಆಫ್ ಇಂಡಿಯಾ ಶಾಖೆ ಕಮಲಾಪುರ ಬ್ಯಾಂಕ್ ಖಾತೆ ಸಂಖ್ಯೆ:5169 ಸಾಮಾನ್ಯ ಖಾತೆಗೆ ಜಮ ಆಗುತ್ತದೆ. ನಂತರ ಅವುಗಳನ್ನು ಸಂಬಂಧಿಸಿದ ಆಯಾ ಲೆಕ್ಕ ಶೀರ್ಷಿಕೆವಾರು ಬ್ಯಾಂಕ್ ಖಾತೆಗೆ ವರ್ಗಾಯಿಸಿ ವೆಚ್ಚ ಭರಿಸಲಾಗುತ್ತದೆ. ಸಾಮಾನ್ಯ ನಗದು ಪುಸ್ತಕದಲ್ಲಿ ಹಣಕಾಸು ವ್ಯವಹಾರ ನಿರ್ವಹಿಸಿದೆ.</td>
<td></td>
<td></td>
</tr>
<tr>
<td>10</td>
<td>10. ವರ್ಗೀಕೃತ ಜಮಾ ಹಾಗೂ ಖರ್ಚುಗಳು<br>ಕನ್ನಡ ವಿಶ್ವವಿದ್ಯಾಲಯದ 2009–10ನೇ ಸಾಲಿನ ವರ್ಗೀಕೃತ ಜಮಾ ಹಾಗೂ ಖರ್ಚುಗಳು ಈ ಕೆಳಗಿನಂತಿವೆ.</td>
<td>2009–10ನೇ ಸಾಲಿನ ವರ್ಗೀಕೃತ ಜಮೆ ಹಾಗೂ ಖರ್ಚುಗಳ ವಹಿಯನ್ನು ನಿರ್ವಹಿಸಿ ದೃಢೀಕರಿಸಿದೆ.</td>
<td></td>
<td></td>
</tr>
</table>



PDF created with pdfFactory trial version www.pdffactory.com

| | | | | |
|---|---|---|---|---|
| | 1. ಜಮಾ 110392839–37<br>2. ಖರ್ಚುಗಳು 136334766<br>ವರ್ಗೀಕೃತ ಜಮಾ ಖರ್ಚುಗಳ ವಹಿಯನ್ನು ನಿರ್ವಹಿಸಿರುವುದಿಲ್ಲ. ಆದರೆ ಸಂಸ್ಥೆಯವರು ನೀಡಿದ 2009–10ನೇ ಸಾಲಿನ ಜಮಾ ಖರ್ಚುಗಳ ವಿವರಣೆಗಳನ್ನು ಅನುಬಂಧ 2(ಎ)(ಬಿ)ರಲ್ಲಿ ಲಗತ್ತಿಸಿದೆ. | | | |
| 11 | **ವಾರ್ಷಿಕ ಲೆಕ್ಕ ಪತ್ರಗಳ ಬಗ್ಗೆ**<br>ಕನ್ನಡ ವಿಶ್ವವಿದ್ಯಾಲಯದ 2009–10ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಕಾರ್ಯಕಾರಿ ಸಮಿತಿ ದಿನಾಂಕ:09–07–2010ರಲ್ಲಿ ಈ ಕೆಳಗೆ ನೀಡಲಾದ ವಿವರಗಳೊಂದಿಗೆ ಅನುಮೋದಿಸಲಾಗಿದೆ.<br>01–04–2009ರ ಆರಂಭ ಶಿಲ್ಕು 66918075–73<br>2009–10ರ ಜಮಾಗಳು 09883259–40<br>**ಒಟ್ಟು 176801335–13**<br>ವೆಚ್ಚಗಳು 136334776–00<br>ಅಂತ್ಯಶಿಲ್ಕು 40466559–13 | | | |
| 12 | **ನೊಂದಣಿ ಪ್ರವೇಶ ಪರೀಕ್ಷೆ ಮತ್ತು ಇತರೆ ಶುಲ್ಕಗಳ ಬಗ್ಗೆ**<br>ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಎ.ಪಿಎಚ್.ಡಿ., ಎಂ.ಫಿಲ್., ಡಿ.ಲಿಟ್, ಸಂಗೀತ, ಚಿತ್ರಕಲಾ, ತರಗತಿ ಮತ್ತು ದೂರಶಿಕ್ಷಣ ಕೇಂದ್ರದಿಂದ ಹಲವಾರು ಸ್ನಾತಕೋತ್ತರ, ಡಿಪ್ಲೊಮಾ ತರಗತಿಗಳು ನಡೆಯುತ್ತಿದ್ದು ಸಂಬಂಧಪಟ್ಟ ಸಮಿತಿ ಸಭೆಗಳಲ್ಲಿ ನೊಂದಣಿ ಶುಲ್ಕ ಪ್ರವೇಶ ಶುಲ್ಕ ಪರೀಕ್ಷೆ ಶುಲ್ಕ ಮತ್ತು ಇತರೆ ಶುಲ್ಕಗಳ ದರಗಳನ್ನು ಹೀಗಾಗಿ ನಿಗದಿಪಡಿಸಲಾಗುತ್ತಿದೆ. ಅದರಂತೆ ವಿವಿಧ ಕೋರ್ಸುಗಳಿಗೆ ವಿದ್ಯಾರ್ಥಿಗಳಿಂದ ಶುಲ್ಕ ವಸೂಲಿಸಲಾಗಿದೆ. | | | |
| 13 | **ಪ್ರಸಾರಾಂಗದ 2009–10ನೇ ಸಾಲಿನ ರಶೀದಿ ಪುಸ್ತಕದ ದಾಸ್ತಾನು ಲೆಕ್ಕ ತನಿಖೆಗೆ ಹಾಜರುಪಡಿಸದ ವಿವರಗಳು ಈ ಕೆಳಗಿನಂತಿದೆ**<br>**ಸರಸ್ವತಿ ಪುಸ್ತಕ ಮಾರಾಟ ಮಳಿಗೆ** | | | |



PDF created with pdfFactory trial version www.pdffactory.com

| | | | | |
|---|---|---|---|---|
| | **(ಎ) ನಗದು ರಸೀದಿ ಪುಸ್ತಕಗಳು**<br>01–04–2009ರ ಆರಂಭದ ದಾಸ್ತಾನು 10<br>2009–10ರಲ್ಲಿ ಖರೀದಿಸಿದ ಪುಸ್ತಕಗಳು 99<br>**ಒಟ್ಟು ಪುಸ್ತಕಗಳು 109**<br>2009–10ನೇ ಸಾಲಿನಲ್ಲಿ ಬಳಕೆಯಾದ ರಸೀದಿ ಪುಸ್ತಕಗಳು (–)85<br>31–03–2010ಕ್ಕೆ ಉಳಿದ ರಸೀದಿ ಪುಸ್ತಕಗಳು 24<br>**(ಬಿ) 2009–10ರ ಸಾಲದ ರಸೀದಿ ಪುಸ್ತಕಗಳು**<br>01–04–2009ರ ಆರಂಭದ ದಾಸ್ತಾನು 13<br>2009–10ರಲ್ಲಿ ಖರೀದಿಸಿದ ಪುಸ್ತಕಗಳು –<br>**ಒಟ್ಟು ಪುಸ್ತಕಗಳು 13**<br>2009–10ನೇ ಸಾಲಿನಲ್ಲಿ ಬಳಕೆಯಾದ ರಸೀದಿ ಪುಸ್ತಕಗಳು (–)5<br>31–03–2010ಕ್ಕೆ ಉಳಿದ ರಸೀದಿ ಪುಸ್ತಕಗಳು 4<br>(ಸಿ) 2009–10ರ ನಿಯತಕಾಲಿಕೆಗಳ ನಗದು ರಸೀದಿ ಪುಸ್ತಕಗಳು<br>01–04–2009ರ ಆರಂಭದ ದಾಸ್ತಾನು 23<br>2009–10ರಲ್ಲಿ ಖರೀದಿಸಿದ ಪುಸ್ತಕಗಳು –<br>**ಒಟ್ಟುಪುಸ್ತಕಗಳು 23**<br>2009–10ನೇ ಸಾಲಿನಲ್ಲಿ ಬಳಕೆಯಾದ ರಸೀದಿ ಪುಸ್ತಕಗಳು (–)3<br>31–03–2010ಕ್ಕೆ ಉಳಿದ ರಸೀದಿ ಪುಸ್ತಕಗಳು 20<br>(ಡಿ) 2009–10ರ ನಿಯತಕಾಲಿಕೆಗಳ ಸಾಲದ ರಸೀದಿ ಪುಸ್ತಕಗಳು<br>01–04–2009ರ ಆರಂಭದ ದಾಸ್ತಾನು 14<br>2009–10ರಲ್ಲಿ ಖರೀದಿಸಿದ ಪುಸ್ತಕಗಳು –<br>**ಒಟ್ಟು ಪುಸ್ತಕಗಳು 14**<br>2009–10ನೇ ಸಾಲಿನಲ್ಲಿ ಬಳಕೆಯಾದ ರಸೀದಿ ಪುಸ್ತಕಗಳು (–)1<br>31–03–2010ಕ್ಕೆ ಉಳಿದ ರಸೀದಿ ಪುಸ್ತಕಗಳು 13<br>(ಇ) 2009–10ನೇ ಸಾಲಿನ ಸಾಮಾನ್ಯ ರಸೀದಿ ಪುಸ್ತಕಗಳ ದಾಸ್ತಾನು ವಿವರಗಳು<br>01–04–2009ರ ಆರಂಭದ ದಾಸ್ತಾನು 12 | | | |



PDF created with pdfFactory trial version www.pdffactory.com

| | | | | |
|---|---|---|---|---|
| | 2009–10ರಲ್ಲಿ ಖರೀದಿಸಿದ ಪುಸ್ತಕಗಳು 300<br>ಒಟ್ಟುಪುಸ್ತಕಗಳು 312<br>2009–10ನೇ ಸಾಲಿನಲ್ಲಿ ಬಳಕೆಯಾದ ರಸೀದಿ ಪುಸ್ತಕಗಳು (–)83<br>31–03–2010ಕ್ಕೆ ಉಳಿದ ರಸೀದಿ ಪುಸ್ತಕಗಳು 229<br>ಮೇಲ್ಕಾಣಿಸಿದಂತೆ ರಸೀದಿ ಪುಸ್ತಕಗಳ ಸಂಗ್ರಹ ಲೆಕ್ಕ ಪರಿಶೀಲಿಸಲಾಗಿ ಉಪಯೋಗಿಸದೇ ಉಳಿದ ರಸೀದಿ ಪುಸ್ತಕಗಳ ಅಂತ್ಯ ಶಿಲ್ಕುನೊಂದಿಗೆ ತಾಳೆಯಾಗಿರುತ್ತದೆ. | | | |
| | **ಋಣ ಶೀರ್ಷಿಕೆಗಳು** | | | |
| 14 | **ಗುತ್ತಿಗೆದಾರರ ಠೇವಣಿ ರಿಜಿಸ್ಟರನ್ನು ಹಾಜರುಪಡಿಸದಿರುವುದು**<br>ಗುತ್ತಿಗೆದಾರರ ಠೇವಣಿ ರಿಜಿಸ್ಟರ್‌ನ್ನು ಲೆಕ್ಕ ತನಿಖೆಗೆ ಹಾಜರುಪಡಿಸಿಲ್ಲ. ಆದುದರಿಂದ 2009–10ನೇ ಸಾಲಿನ ವಿವಿಧ ಗುತ್ತಿಗೆದಾರರಿಂದ ಪಡೆದ ಠೇವಣಿ ಮೊತ್ತ ಮರುಪಾವತಿ ಮಾಡಿದ ಠೇವಣಿ ಮೊತತ ಹಾಗೂ ವರ್ಷಾಂತ್ಯಕ್ಕೆ ಇದ್ದ ಗುತ್ತಿಗೆದಾರರ ಠೇವಣಿ ಎಷ್ಟೆಂಬುದನ್ನು ತಿಳಿಯಲಾಗಿಲ್ಲ.<br>ಸದರಿ ರಿಜಿಸ್ಟರ್‌ನ್ನು ನಿರ್ವಹಿಸಿ ಮುಂದಿನ ಲೆಕ್ಕ ತನಿಖೆಯಲ್ಲಿ ಹಾಜರುಪಡಿಸಲು ಹಿಂದಿನ ವರ್ಷದ ಲೆಕ್ಕ ತನಿಖಾ ವರದಿಯ ಪ್ಯಾರಾ 48ರಲ್ಲಿ ತಿಳಿಸಿದಾಗ್ಯೂ ಪ್ರಸ್ತುತ ಲೆಕ್ಕ ತನಿಖಾ ಸಮಯದಲ್ಲಿ ಹಾಜರುಪಡಿಸಿರುವುದಿಲ್ಲ. | ಗುತ್ತಿಗೆದಾರ ಠೇವಣಿ ರಿಜಿಸ್ಟರ್‌ನ್ನು ನಿರ್ವಹಿಸಲಾಗಿದೆ.<br>ಸದರಿ ರಿಜಿಸ್ಟಾರನ್ನು ಲೆಕ್ಕ ತನಿಖೆಗೆ ಹಾಜರಪಡಿಸಲಾಗುವುದು.<br>2009–10ನೇ ಸಾಲಿನ ಗುತ್ತಿಗೆದಾರರ ಠೇವಣಿ ಕೆಳಗಿನಂತಿದೆ<br>ಆರಂಭದ ಶಿಲ್ಕು: 44322–00<br>ಜಮೆಗಳ: 934325–00<br>**ಒಟ್ಟು ಮೊತ್ತ: 978647–00**<br>ವೆಚ್ಚಗಳು: 632325–00<br>ಕೊನೆಯ ಶಿಲ್ಕು: 346322–00 | | |
| 15 | **ಭದ್ರತಾ ಠೇವಣಿ**<br>ಕನ್ನಡ ವಿಶ್ವವಿದ್ಯಾಲಯದ ಈ ಕೆಳಗಿನ ಅಧಿಕಾರಿ/ನೌಕರರಿಂದ ಭದ್ರತಾ ಠೇವಣಿ ಪಡೆಯಲಾಗಿದೆ. | ಸೂಕ್ತ ಸಿಬ್ಬಂದಿಗಳಿಂದ ಭದ್ರತಾ ಠೇವಣಿಯನ್ನು ಪಡೆದುಕೊಳ್ಳಲಾಗುವುದು. | | |



PDF created with pdfFactory trial version www.pdffactory.com

<table>
<tr>
<td></td>
<td>
<table>
<tr><td>ಕ್ರ.ಸಂ.</td><td>ಹೆಸರು</td><td>ಮೊತ್ತ</td></tr>
<tr><td>1</td><td>ಶ್ರೀ ಜೈನುಲ್ಲಾ ಬಳ್ಳಾರಿ, ಸಹಾಯಕ ನಿರ್ದೇಶಕರು</td><td>1000</td></tr>
<tr><td>2</td><td>ಶ್ರೀ ಜೆ.ರಾಮಮೂರ್ತಿ, ಗ್ರಂಥಪಾಲಕರು</td><td>1000</td></tr>
<tr><td>3</td><td>ಶ್ರೀ ಎ.ವೆಂಕಟೇಶ್, ಸಹಾಯಕ ಕುಲಸಚಿವರು</td><td>1000</td></tr>
<tr><td>4</td><td>ಶ್ರೀ ಕೆ.ಪ್ರೇಮಕುಮಾರ್, ಉಪಕುಲಸಚಿವರು</td><td>1000</td></tr>
<tr><td>5</td><td>ಶ್ರೀ ಕೆ.ಎಸ್.ಮರಿಸ್ವಾಮಿ, ಕಿರಿಯ ಸಹಾಯಕ</td><td>1000</td></tr>
<tr><td>6</td><td>ಶ್ರೀ ಕೆ.ಎಚ್.ಕಟ್ಟಿ, ಸಾರ್ವಜನಿಕ ಸಂಪರ್ಕಾಧಿಕಾರಿಗಳು</td><td>1000</td></tr>
<tr><td>7</td><td>ಶ್ರೀ ಈ.ಟಿ.ನಾಗರಾಜ, ಅಧೀಕ್ಷಕರು</td><td>1000</td></tr>
<tr><td>8</td><td>ಶ್ರೀ ರೆಹಮತುಲ್ಲಾ, ವಾಹನ ಚಾಲಕರು</td><td>1000</td></tr>
<tr><td>9</td><td>ಶ್ರೀ ಪುಟ್ಟಮಾದಯ್ಯ, ವಾಹನ ಚಾಲಕರು</td><td>1000</td></tr>
<tr><td>10</td><td>ಶ್ರೀ ಶಿವಾನಂದ, ವಾಹನ ಚಾಲಕರು</td><td>1000</td></tr>
<tr><td>11</td><td>ಶ್ರೀ ವಿ.ಸಿ.ರತ್ನಾಕರ, ವಾಹನ ಚಾಲಕರು</td><td>1000</td></tr>
<tr><td>12</td><td>ಶ್ರೀ ಎರ್ರಿಸ್ವಾಮಿ, ವಾಹನಚಾಲಕರು</td><td>1000</td></tr>
</table>
ಮೇಲಿನ ನೌಕರರ ಪೈಕಿ ಕೆಲವರು ಬೇರೆ ಶಾಖೆಗಳಿಗೆ ವರ್ಗಾಯಿಸಿದ್ದು ಮತ್ತು ಅವರ ಜಾಗಗಳಿಗೆ ಬೇರೊಬ್ಬ ನೌಕರರಿಗೆ ನಿಯೋಜಿಸಿದ್ದು ಅಂತಹವರಿಂದ ಭದ್ರತಾ ಠೇವಣಿ ಪಡೆಯಲು ಸೂಚಿಸಲಾಗಿದೆ.
</td>
<td>
<table>
<tr><td>ಕ್ರ.ಸಂ</td><td>ಹೆಸರು</td><td>ಮೊತ್ತ</td></tr>
<tr><td>01</td><td>ಡಾ.ಎ.ನಾಗವೇಣಿ, ಗ್ರಂಥಪಾಲಕರು</td><td>1000–00</td></tr>
<tr><td>02</td><td>ಶ್ರೀ ಗುರುಬಸಪ್ಪ, ಸಹಾಯಕ ಕುಲಸಚಿವರು</td><td>1000–00</td></tr>
<tr><td>03</td><td>ಶ್ರೀಕೃಷ್ಣಕುಮಾರ್, ಕಿರಿಯ ಸಾಹಯಕರು</td><td>1000–00</td></tr>
<tr><td>04</td><td>ಶ್ರೀಮಹೇಶ್ ಉಣಕಲ್, ಯೋಜನಾಧಿಕಾರಿಗಳು</td><td>1000–00</td></tr>
<tr><td>05</td><td>ಶ್ರೀಮತಿ ಡಿ.ಪ್ರಭಾ, ಅಧೀಕ್ಷಕರು</td><td>1000–00</td></tr>
<tr><td>06</td><td>ಶ್ರೀಗಿರಿಯನಾಯಕ, ವಾಹನ ಚಾಲಕ</td><td>1000–00</td></tr>
</table>
ಇವರಿಂದ ಮೇಲಿನಂತೆ ಭದ್ರತಾ ಠೇವಣಿಯನ್ನು ಪಡೆದುಕೊಳ್ಳಲಾಗುವುದು.
</td>
<td></td>
<td></td>
</tr>
<tr>
<td>16.</td>
<td>
ಸಾಲಗಳು
2009–10ನೇ ಸಾಲಿನ ಲೆಕ್ಕ ತನಿಖೆ ಸಮಯದಲ್ಲಿ ಸಾಲಗಳ ರಿಜಿಸ್ಟರ್‌ನ್ನು ಪರಿಶೀಲಿಸಲಾಗಿ ಈ ಕೆಳಕಂಡ ಠೇವಣಿಗಳನ್ನು ಸರ್ಕಾರದ ಪೂರ್ವಾನುಮತಿ ಇಲ್ಲದೆ ಅಡವಿಟ್ಟು ಸಾಲ ಪಡೆದಿರುವುದು ಕಂಡುಬಂದಿದೆ.
1. ರೂ.4500000–00ಗಳ ಪಿಂಚಣಿವಂತಿಗೆ ಸಾವಧಿ ಠೇವಣಿಯನ್ನು ಅಡವಿಟ್ಟು ರೂ.2800000–00ಗಳನ್ನು ಸಾಲವನ್ನು ಸಿಬ್ಬಂದಿಗಳ ವಸತಿಗೃಹಗಳನ್ನು ನಿರ್ಮಿಸುವ ಪ್ರಯುಕ್ತ ಬ್ಯಾಂಕ್ ಆಫ್ ಇಂಡಿಯಾ ಕಮಲಾಪುರದಿಂದ ದಿನಾಂಕ 14–12–2007ರಂದು ಪಡೆಯಲಾಗಿದೆ.
2. ರೂ.2400000–00ಗಳು(1000000+400000) ಪೀಠಗಳ ಸಾವಧಿ ಠೇವಣಿಯನ್ನು ಅಡವಿಟ್ಟು ರೂ.1792000–00ಗಳ ಸಾಲವನ್ನು ಬೋಧಕ/ಬೋಧಕೇತರ ಸಿಬ್ಬಂದಿಗಳ ವೇತನ ತುಟ್ಟಿಭತ್ಯೆ ಮತ್ತು ಮನೆಬಾಡಿಗೆ ಹೆಚ್ಚುವರಿಯಾಗಿ ಮಂಜೂರಾದ ಪ್ರಯುಕ್ತ ಪಾವತಿಸಲು ಬ್ಯಾಂಕ್ ಆಫ್ ಇಂಡಿಯಾ ಕಮಲಾಪುರದಿಂದ ದಿನಾಂಕ 27–08–2007ರಂದು ಪಡೆಯಲಾಗಿದೆ.
</td>
<td>
2007–08ನೇ ಸಾಲಿನಲ್ಲಿ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ವಸತಿ ಗೃಹಗಳ ನಿರ್ಮಾಣಕ್ಕಾಗಿ ಮತ್ತು ಕಾರ್ಯಾಲಯದ ಉಪಯೋಗಕ್ಕಾಗಿ ವಾಹನ ಖರೀದಿಗಾಗಿ ಸಾವಧಿ ಠೇವಣಿಯನ್ನು ಬ್ಯಾಂಕಿನಲ್ಲಿ ಅಡವಿಟ್ಟು ಸಾಲ ಪಡೆಯಲಾಗಿದ್ದು, ಸರಕಾರದ ಪೂರ್ವಾನುಮತಿ ಪಡೆದಿರುವುದಿಲ್ಲ.
ಈಗ ಬ್ಯಾಂಕಿನ ಎಲ್ಲಾ ಸಾಲಗಳನ್ನು ತಿರುವಳಿ ಮಾಡಿದೆ. ಯಾವುದೇ ಸಾಲಗಳು ಬಾಕಿ ಇರುವುದಿಲ್ಲ.
ವಾಹನ ಖರೀದಿಗಾಗಿ ಪ್ರಸಕ್ತ ಸಾಲಿನಲ್ಲಿ ಸರಕಾರದ ಪೂರ್ವಾನುಮತಿ ಪಡೆದು ಈ ಸಂಸ್ಥೆಯ ಆದಾಯ ಮೂಲಗಳಿಂದ ವಾಹನಗಳನ್ನು ಖರೀದಿಸಲಾಗಿದೆ.
ತಮ್ಮ ನಿರ್ದೇಶನದಂತೆ ಸರಕಾರದ ನಿಯಮಾವಳಿಗಳನ್ನು ಪಾಲಿಸಲಾಗುವುದು.
</td>
<td></td>
<td></td>
</tr>
</table>



PDF created with pdfFactory trial version www.pdffactory.com

<table>
<tr><td></td><td>3. ರೂ.5300000–00ಗಳು(ಪೀಠಗಳ ಸಾವಧಿ ಠೇವಣಿಗಳು) 1000000+3500000+800000)ಯನ್ನು ಅಡಿವಿಟ್ಟು ರೂ.1500252–00ಗಳ ಸಾಲವನ್ನು 2 ಕಾರುಗಳು ಮತ್ತು ಟಾಟಾ ಸುಮೊಗಳನ್ನು ಖರೀದಿಸಲು ಪಡೆಯಲಾಗಿದೆ. ಇದರ ಪೂರ್ಣ ಸಾಲದ ಮೊತ್ತವನ್ನು ತಿರುವಳಿ ಮಾಡಿ ಸಾವಧಿ ಠೇವಣಿಗಳನ್ನು ವಾಪಸ್ ಪಡೆಯಲಾಗಿರುತ್ತದೆ.<br>ಮೇಲಿನ ಸಾಲಗಳ ವಿವರಗಳು ಅನುಬಂಧ–4ರಲ್ಲಿ ಲಗತ್ತಿಸಿದೆ. ಕಾರಣ ಮೇಲಿನ ಸಾಲಗಳನ್ನು ಈಗಾಗಲೇ ಪಡೆದಿದ್ದು ಸದರಿ ಬಗ್ಗೆ ಸರ್ಕಾರದ Post Facto Sanction ಯನ್ನು ಪಡೆಯಲು ಸೂಚಿಸಿದೆ.</td><td></td><td></td><td></td></tr>
<tr><td>17</td><td>ಮುಂಗಡಗಳು<br>ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ ಈ ಕೆಳಗಿನಂತ ಮೂರು ಮುಂಗಡಗಳ ರಿಜಿಸ್ಟ್ರಗಳನ್ನು ನಿರ್ವಹಿಸಲಾಗಿದೆ. 2009–10ನೇ ಸಾಲಿನಲ್ಲಿ ಮುಂಗಡಗಳ ವ್ಯವಹಾರ ಈ ಕೆಳಗಿನಂತಿದೆ.
<table>
<tr><th>ಕ್ರ.ಸಂ.</th><th>ವಿವರಗಳು</th><th>ಸಾಮಾನ್ಯ</th><th>ಇತರೆ</th><th>ಪ್ರಸಾರಾಂಗ</th><th>ಒಟ್ಟು</th></tr>
<tr><td>1</td><td>ಪ್ರಾರಂಭದ ಶಿಲ್ಕು</td><td>5971086</td><td>3335545</td><td>9000</td><td>9315631</td></tr>
<tr><td>2</td><td>ನೀಡಲಾದ ಮುಂಗಡ</td><td>10845778</td><td>10442670</td><td>508900</td><td>21797348</td></tr>
<tr><td></td><td>ಒಟ್ಟು</td><td>16816864</td><td>13778215</td><td>517900</td><td>31112979</td></tr>
<tr><td>3</td><td>ಹೊಂದಾಣಿಕೆ</td><td>8029727</td><td>6233560</td><td>302500</td><td>14565487</td></tr>
<tr><td>4</td><td>ಅಂತಿಮ ಶಿಲ್ಕು</td><td>8787137</td><td>7544655</td><td>215400</td><td>16547192</td></tr>
</table>
ಮೇಲ್ಕಾಣಿಸಿದ ಮುಂಗಡಗಳನ್ನು ಹೊಂದಾಣಿಕೆ ಮಾಡಲು ಕ್ರಮವಹಿಸಲು ಸೂಚಿಸಿದೆ.</td><td>ಬಾಕಿ ಇರುವ ಮುಂಗಡಗಳ ಲೆಕ್ಕ ಹೊಂದಾಣಿಕೆ ಮಾಡಿಕೊಳ್ಳಲಾಗಿದೆ.<br><br>ಮುಂಗಡ ವಹಿಯಲ್ಲಿ ಸೂಕ್ತವಾಗಿ ದಾಖಲಿಸಿ ವರ್ಷಾಂತ್ಯಕ್ಕೆ ಘೋಷ್ವಾರು ಹಾಕಿ ದೃಢೀಕರಿಸಲಾಗಿದೆ.</td><td></td><td></td></tr>
<tr><td>18</td><td>ಭೂಸೇನಾ ನಿಮಗ, ಇವರಿಗೆ ಅಕ್ಷರ ಗ್ರಂಥಾಲಯದ ಒಪನ್ ಟೆರಸ್‌ಗೆ ಟ್ರಸ್ ಹಾಕಿ ಸೀಟ್ ಅಳವಡಿಸುವ ಕಾಮಗಾರಿ ವಹಿಸಿದ ಬಗ್ಗೆ<br>2008–09ನೇ ಸಾಲಿನಲ್ಲಿ ಗ್ರಂಥಾಲಯದ ಒಪನ್ ಟೆರಸ್‌ಗೆ ಟ್ರಸ್ ಹಾಕಿ ಶೀಟ್ ಅಳವಡಿಸಲು ಅಂದಾಜು ಮೊತ್ತ ರು.12.10 ಲಕ್ಷಗಳ ಕಾಮಗಾರಿಯನ್ನು ಭೂ ಸೇನಾ ನಿಗಮ ಇವರಿಗೆ 30 ದಿನಗಳಲ್ಲಿ ಕಾಮಗಾರಿ ಪೂರ್ಣಗೊಳಿಸಲು ಕೆಲಸ ಆದೇಶ ದಿನಾಂಕ 9–06–2008ರಲ್ಲಿ ನೀಡಲಾಗಿದೆ.<br><br>ಸದರಿ ಕಾಮಗಾರಿ ಕಡತ ಪರಿಶೀಲಿಸಲಾಗಿ ಕೆಳಕಂಡ ನ್ಯೂನತೆಗಳು ಕಂಡುಬಂದಿದೆ.<br>1. ಕಾಮಗಾರಿ ಕೈಗೊಳ್ಳಲು ಯು.ಜಿ.ಸಿ.ಹನ್ನೊಂದನೆಯ ಯೋಜನೆಯಡಿ(Merged Scheme)ರೂ.10.00ಲಕ್ಷ ಗಳನ್ನು (Basic Facilities for women)ಶೀರ್ಷಿಕೆಯಿಂದ ಭರಿಸಲು ಕುಲಪತಿಗಳು ಕಚೇರಿ ಟಿಪ್ಪಣಿಯ ಕಂಡಿ(14)ರಲ್ಲು ಅನುಮೋದನೆ ನೀಡಿರುತ್ತಾರೆ. ಆದರೆ ಸದರಿ ಕಾಮಗಾರಿಯನ್ನು ರೂ.12.10ಲಕ್ಷಗಳ ಮೊತ್ತ</td><td>ಹೆಚ್ಚುವರಿ ಮೊತ್ತ ರೂ.2–10ಲಕ್ಷಗಳನ್ನು ಅಭಿವೃದ್ಧಿ ಅನುದಾನದಿಂದ ವೆಚ್ಚಭರಿಸಲಾಗಿದೆ.<br><br>ಉಪನಿರ್ದೇಶಕರು, ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ ಡೆವಲಪ್‌ಮೆಂಟ್ ಲಿಮಿಟೆಡ್, ಬಳ್ಳಾರಿ ಇವರು ತಮ್ಮ ಪತ್ರ ಸಂಖ್ಯೆ:ಉನಿ.ಕೆ.ಆರ್.ಐ.ಡಿ, ಬಳ್ಳಾರಿ ಕನ್ನಡ/ಯುನಿವರ್ಸಿಟಿ/11–12 ದಿನಾಂಕ:15.12.2011ರನ್ವಯ ಅಳತೆ ಪುಸ್ತಕದ</td><td></td><td></td></tr>
</table>



PDF created with pdfFactory trial version www.pdffactory.com

<table>
<tr><td></td><td>ವೆಚ್ಚವಾಗಿದ್ದು ಉಳಿದ ಮೊತ್ತ ರೂ.2.10ಲಕ್ಷ ಯಾವ ಲೆಕ್ಕ ಶೀರ್ಷಿಕೆಯಡಿಯಿಂದ ಭರಿಸಲಾಗಿದೆ ಎಂಬ ವಿವರ ಲೆಕ್ಕ ತಪಾಸಣೆ ಹಾಜರುಪಡಿಸಿಲ್ಲ ಈ ಸಂಬಂಧ ಸ್ಪಷ್ಟೀಕರಣ ಅಗತ್ಯವಿದೆ.<br>2. ಭೂಸೇನಾ ನಿಗಮ ಇವರು ಪಡೆದ ಮೊತ್ತಗಳಿಗೆ ಖರ್ಚು ಆದ ಬಗ್ಗೆ ಪ್ರಗತಿ ವರದಿ ಹಾಗೂ ಹಣ ಬಳಕೆ ಪ್ರಮಾಣ ಪತ್ರಗಳನ್ನು ನೀಡಿರುತ್ತಾರೆ. ಅಂದಾಜು ಪಟ್ಟಿ ಆಡಳಿತಾತ್ಮಕ/ತಾಂತ್ರಿಕ ಮಂಜುರಾತಿ ಪಡೆಯಲಾಗಿದೆ. ಆದರೆ ಸದರಿ ಕಾಮಗಾರಿ ಸಂಬಂಧ ಭೂಸೇನಾ ನಿಗಮದವರು ನೀಡಿದ ಪ್ರಗತಿ ವರದಿಯಲ್ಲಿ ಭೌತಿಕ ಹಾಗೂ ಆರ್ಥಿಕ ಪ್ರಗತಿ ವರದಿ ತಾಂತ್ರಿಕ ಮಂಜೂರಾತಿ ಪಡೆದ ಅಂದಾಜು ಪತ್ರಿಕೆ ಅನುಸಾರ ಐಟಂಗಳ ಭೌತಿಕ ಹಾಗೂ ಆರ್ಥಿಕ ಪ್ರಗತಿ ವರದಿ ನೀಡಿರುವುದಿಲ್ಲ. ಮಂಜೂರಾದ ತಾಂತ್ರಿಕ ಮಂಜೂರಾತಿ ಪಡೆದ ಅಂದಾಜು ಪತ್ರಿಕೆ ಅನುಸಾರ ಕಾಮಗಾರಿ ಅನುಷ್ಠಾನಗೊಂಡ ಬಗ್ಗೆ ಲೆಕ್ಕ ತಪಾಸಣೆಗೆ ವಿವರಗಳು ಹಾಜರುಪಡಿಸಿಲ್ಲ. ಈ ಕಾರಣಕ್ಕಾಗಿ ಸದರಿ ವಿವರಗಳು ಲೆಕ್ಕ ತಪಾಸಣೆಗೆ ದೃಢಪಡೆಯುವವರೆಗೂ ರೂ.12.10ಲಕ್ಷಗಳನ್ನು ಆಕ್ಷೇಪಣೆ ಮಾಡಲಾಗಿದೆ.<br>3. ಸದರಿ ಕಾಮಗಾರಿಗೆ ಸಂಬಂಧಿಸಿದಂತೆ ಆದಾಯ ತೆರಿಗೆ ರೂ.27104-00 ಮತ್ತು ಮಾರಾಟ ತೆರಿಗೆ, ರೂ.484000-00ಗಳು ಮಾತ್ರ ಕಡಿತಗೊಳಿಸಿರುತ್ತಾರೆ. ಆದರೆ ಅದಕ್ಕೆ ಸಂಬಂಧಿಸಿದ ಲೇಬರ್ ಸೆಟ್ 1% ರೂ.12100-00ಗಳು ಕಡಿತ ಮಾಡಿರುವುದಿಲ್ಲ. ತಕ್ಷಣ ರೂ.12100-00ಗಳು ಕಡಿತಗೊಳಿಸಿ ಸಂಬಂಧಿಸಿದ ಇಲಾಖೆಗೆ ಸಂದಾಯ ಮಾಡಿ ಮುಂದಿನ ತನಿಖೆಯಲ್ಲಿ ಹಾಜರುಪಡಿಸಲು ಸೂಚಿಸಲಾಗಿದೆ.<br>4. ಸದರಿ ಕಾಮಗಾರಿಯನ್ನು ವಿಶ್ವವಿದ್ಯಾಲಯದ ತಾಂತ್ರಿಕ ವಿಭಾಗದಿಂದ ಕಾಮಗಾರಿ ಗುಣಮಟ್ಟದ ಬಗ್ಗೆ ಪರಿಶೀಲಿಸಿದ ಬಗ್ಗೆ ಸೂಕ್ತ ದೃಢೀಕರಣ ಇರುವುದಿಲ್ಲ. ಇದರಿಂದಾಗಿ ಕಾಮಗಾರಿ ಗುಣಮಟ್ಟದ ಬಗ್ಗೆ ವಿಶ್ವವಿದ್ಯಾಲಯ ಪಾವತಿಯನ್ನು ಖಚಿತಪಡಿಸಿಕೊಂಡಿರುವುದಿಲ್ಲ. ಈ ಬಗ್ಗೆ ಸೂಕ್ತ ಸ್ಪಷ್ಟತೆ ಅಗತ್ಯವಿದೆ.<br>5. ಸದರಿ ಕಾಮಗಾರಿ ಪೂರ್ಣಗೊಳ್ಳಲು 30 ದಿನಗಳ ಕಾಲ ಅವಧಿ ನಿಗದಿಪಡಿಸಲಾಗದೆ. ಆದರೆ ಕಾಮಗಾರಿ ಪೂರ್ಣಗೊಳ್ಳಲು 7ತಿಂಗಳ ಅವಧಿ ತೆಗೆದುಕೊಳ್ಳಲಾಗಿದೆ. ಇದರಿಂದ 6 ತಿಂಗಳ ವಿಳಂಬವಾಗಿರುತ್ತದೆ(ಪ್ರಾರಂಭ 6/08 ಪೂರ್ಣಗೊಂಡಿದ್ದು 1/09) ವಿಳಂಬಕ್ಕೆ ಕಾರಣಗಳು ದಾಖಲಾತಿಯಲ್ಲಿ ಸ್ಪಷ್ಟಪಡಿಸಿಲ್ಲ.</td><td>ನೆರಳಚ್ಚು ಪ್ರತಿಯನ್ನು ನೀಡಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿರುತ್ತಾರೆ.<br><br>ಉಪನಿರ್ದೇಶಕರು ಕ.ರೂ.ಇ.ಡೆ.ಲಿ. ಬಳ್ಳಾರಿ ಇವರು ರೂ.12415/-ಗಳನ್ನು ಸರಕಾರಕ್ಕೆ ಮರುಪಾವತಿಸುವ ಕುರಿತು ತಮ್ಮ ದಿನಾಂಕ:28.01.12ರ ಪತ್ರದನ್ವಯ ವ್ಯವಸ್ಥಾಪಕ ನಿರ್ದೇಶಕರು ಬೆಂಗಳೂರು ಇವರನ್ನು ವಿನಂತಿಸಿಕೊಂಡಿರುತ್ತಾರೆ.</td><td></td><td></td></tr>
<tr><td>19</td><td>ಕಾಮಗಾರಿ ಬಿಲ್ಲುಗಳಲ್ಲಿ ಕಾರ್ಮಿಕ ಕಲ್ಯಾಣ ಸುಂಕ ಕಡಿತ ಮಾಡದೇ ಇರುವ ಬಗ್ಗೆ<br>2009-10ನೇ ಸಾಲಿಗೆ ಸಂಬಂಧಿಸಿದಂತೆ, ಕಾಮಗಾರಿ ಬಿಲ್ಲುಗಳು ಪರಿಶೀಲಿಸಲಾಗಿ ಕಾರ್ಮಿಕ ಕಲ್ಯಾಣ ಸುಂಕ ಶೇಕಡ 1%ನ್ನು ಸರ್ಕಾರಿ ಆದೇಶ ಸಂ.ಎಲ್.ಡಿ./300/ಎಲ್.ಇ.ಟಿ./2006, ಬೆಂಗಳೂರು, ದಿನಾಂಕ 18-01-207ರನ್ವಯ ಕಡಿತಗೊಳಿಸಿರುವುದಿಲ್ಲ. ಕಡಿತಗೊಳಿಸದೇ</td><td>ಈ ಕೆಳಗಿನ ಗುತ್ತಿಗೆದಾರರಿಂದ ಕಾರ್ಮಿಕ ಕಲ್ಯಾಣ ಸುಂಕ ಶೇ.1% ವಸೂಲಿಸಿ, ವಸೂಲಿಸಿದ ಮೊತ್ತವನ್ನು ಸರಕಾರದ ಲೆ.ಶಿ.ಗೆ ಜಮ ಮಾಡಲಾಗುವುದು.
<table>
<tr><th>ಕ್ರ.ಸಂ</th><th>ಗುತ್ತಿಗೆದಾರರ ಹೆಸರು</th><th>ವಸೂಲಿಸಿದಮೊತ್ತ</th></tr>
<tr><td>01</td><td>ಶ್ರೀ ಎಸ್.ಗಾಳೆಪ್ಪ</td><td>3360-00</td></tr>
<tr><td>02</td><td>ಶ್ರೀ ಆರ್.ಜಿ.ಪಾಟೀಲ್</td><td>2685-00</td></tr>
<tr><td>03</td><td>ಶ್ರೀ ಜೆ.ಎಂ.ಮಹೇಂದ್ರ</td><td>357-00</td></tr>
<tr><td>04</td><td>ಶ್ರೀ ಎ.ಗೋಪಾಲ</td><td>1377-00</td></tr>
</table></td><td></td><td></td></tr>
</table>



PDF created with pdfFactory trial version www.pdffactory.com

<table>
<tr>
<td></td>
<td>ಇರುವ ಮೊತ್ತ ರೂ.10436–00ಗಳನ್ನು ವಿವರಗಳು ಲಗತ್ತಿಸಲಾದ ಅನುಬಂಧದಲ್ಲಿರುತ್ತದೆ. ಸದರಿ ಮೊತ್ತವನ್ನು ವಸೂಲಿ ಮಾಡಿ The Secretary cum Chief Executive Officer, Karnataka State Building & other Construction workers Welfare board 3rd stage, Karmike Bhavan, Bannerghatta Road, Bangalore 560029 ಇವರಿಗೆ ಪಾವತಿಸಲು ಕೋರಲಾಗಿದೆ.</td>
<td><table>
<tr><td>05</td><td>ಶ್ರೀ ಟಿ.ಎನ್ ನಟರಾಜನ್</td><td>2657–00</td></tr>
<tr><td></td><td>ಒಟ್ಟು ಮೊತ್ತ</td><td>10436–00</td></tr>
</table>
ಶ್ರೀ ಎಸ್.ಗಾಳೆಪ್ಪ ಇವರಿಂದ ಕಾಮಗಾರಿ ಬಿಲ್ಲಿನಲ್ಲಿ ರೂ.3360/–ಗಳನ್ನು ಕಡಿತ ಮಾಡಿ, ಸರಕಾರದ ಲೆಕ್ಕ ಶೀರ್ಷಿಕೆಗೆ 3/2012ನೇ ಮಾಹೆಯಲ್ಲಿ ಜಮೆ ಮಾಡಲಾಗಿದೆ. ಇನ್ನುಳಿದ ಗುತ್ತಿಗೆದಾರರಿಗೆ ಹಣ ಜಮ ಮಾಡಲು ಪತ್ರ ವ್ಯವಹಾರ ಮಾಡಲಾಗಿದೆ. ಈ ಕುರಿತು ಈ ವಿಶ್ವವಿದ್ಯಾಲಯದ ತಾಂತ್ರಿಕ ವಿಭಾಗದ ಮುಖ್ಯಸ್ಥರು ಸೂಕ್ತ ಕ್ರಮಕ್ಕಾಗಿ ಪತ್ರ ನೀಡಲಾಗಿದೆ.</td>
<td></td>
<td></td>
</tr>
<tr>
<td>19ಇ</td>
<td>ಆದಾಯ ತೆರಿಗೆ ಕಡಿಮೆ ವಸೂಲಿಸಿದ್ದು<br>ಕಾಮಗಾರಿ ಬಿಲ್ಲುಗಳಲ್ಲಿ ಶೇ.2.266% ಆದಾಯ ತೆರಿಗೆ ಕಡಿತ ಮಾದೇ 2.24%ಗೆ ಕಡಿತಗೊಳಿಸಲಾಗಿರುತ್ತದೆ. ವ್ಯತ್ಯಾಸದ ಮೊತ್ತ ರೂ.10.667–00ಗಳು ವಸೂಲಿ ಮಾಡಿ ಆದಾಯ ತೆರಿಗೆ ಲೆಕ್ಕ ಶೀರ್ಷಿಕೆಗೆ ಜಮಾ ಮಾಡಲು ಸೂಚಿಸಿದೆ ವಿವರಗಳು ಲಗತ್ತಿಸಲಾದ ಅನುಬಂಧ 5ರಲ್ಲಿರುತ್ತದೆ.</td>
<td>ಈ ಕೆಳಗಿನ ಗುತ್ತಿಗೆದಾರರಿಂದ ಆದಾಯ ತೆರಿಗೆ ವಸೂಲಿಸಿ ಆದಾಯ ತೆರಿಗೆ ಇಲಾಖೆಗೆ ಜಮೆ ಮಾಡಲಾಗುವುದು. ಸಂಬಂಧಸಿದಿ ಗುತ್ತಿಗೆದಾರರಿಗೆ ಪತ್ರ ವ್ಯವಹಾರಿಸಿದೆ.<br>ಶ್ರೀ ಎಸ್.ಗಾಳೆಪ್ಪ ಇವರಿಂದ 88/–ಗಳನ್ನು ಕಾಮಗಾರಿ ಬಿಲ್ಲಿನಲ್ಲಿ ವಸೂಲಿಸಿ 3/2012ನೇ ಮಾಹೆಯಲ್ಲಿ ಸರಕಾರದ ತೆರಿಗೆ ಜಮ ಮಾಡಲಾಗಿದೆ.
<table>
<tr><td>ಕ್ರ.ಸಂ</td><td>ಗುತ್ತಿಗೆದಾರರ ಹೆಸರು</td><td></td><td></td><td></td></tr>
<tr><td>01</td><td>ಶ್ರೀ ಎಸ್.ಗಾಳೆಪ್ಪ</td><td>88–00</td><td>ಗುರುಕೃಪಾ ಟೆಕ್ಸೆ ಟೈಲ್ಸ್</td><td>480–00</td></tr>
<tr><td>02</td><td>ಶ್ರೀ ಆರ್.ಜಿ.ಪಾಟೀಲ್</td><td>71–00</td><td>ವಾಸವಿ ಟ್ರೇಡರ್ಸ</td><td>7474–00</td></tr>
<tr><td>03</td><td>ಶ್ರೀ ಜೆ.ಎಂ.ಮಹೇಂದ್ರ</td><td>9–00</td><td>ನ್ಯೂ ರಾಮ ಸಾಮಿಲ್</td><td>986–00</td></tr>
<tr><td>04</td><td>ಶ್ರೀ ಎ.ಗೋಪಾಲ</td><td>35–00</td><td>ಅಶೋಕ ಪೇಸ್ಟ ಕಂಟ್ರೋಲ್</td><td>1455–00</td></tr>
<tr><td>05</td><td>ಶ್ರೀ ಟಿ.ಎನ್ ನಟರಾಜನ್</td><td>69–00</td><td>–</td><td>00</td></tr>
<tr><td></td><td></td><td></td><td>ಒಟ್ಟು ಮೊತ್ತ</td><td>10667–00</td></tr>
</table></td>
<td></td>
<td></td>
</tr>
<tr>
<td>20</td>
<td>ರಸೀದಿಯನ್ವಯ ಹಣ ಕಡಿಮೆ ಜಮಾ ಬಗ್ಗೆ<br>2009–10ನೇ ಸಾಲಿನಲ್ಲಿ ಲೆಕ್ಕ ತನಿಖೆಯಲ್ಲಿ ರಸೀದಿಯನ್ವಯ ಹಣ ಜಮಾ ಆಗದೇ ಇರುವ ವಿವರಗಳು ಈ ಕೆಳಗಿನಂತಿದೆ.
<table>
<tr><td>ಕ್ರ.ಸಂ.</td><td>ರಸೀದಿ ಸಂಖ್ಯೆ/ದಿನಾಂಕ</td><td>ರಸೀದಿ ಪ್ರಕಾರ ಮೊತ್ತ</td><td>ರೆಮಿಟೆನ್ಸ್ ಪ್ರಕಾರ</td><td>ವ್ಯತ್ಯಾಸ</td></tr>
<tr><td></td><td>ನಗದು ಶಾಖೆ</td><td></td><td></td><td></td></tr>
<tr><td>1</td><td>35542/28–07–2009</td><td>1100</td><td>1000</td><td>100</td></tr>
<tr><td>2</td><td>36153/16–09–2010</td><td>1100</td><td>1000</td><td>100</td></tr>
<tr><td>3</td><td>36676/06–10–2009</td><td>305</td><td>–</td><td>305</td></tr>
</table></td>
<td>ಕಡಿಮೆ ಜಮೆ ಮಾಡಿದ ಮೊತ್ತ ರೂ.2810/–ಗಳನ್ನು ರಸೀದಿ ಸಂಖ್ಯೆ:46919 ದಿನಾಂಕ:10.02.2012ರನ್ವಯ ವಸೂಲಿಸಿ ಸಂಸ್ಥೆಯ ನಿಧಿಗೆ ಜಮೆ ಮಾಡಲಾಗಿದೆ. ಹಾಗೂ ರೂ.10/– ಗಳನ್ನು ರಸೀದಿ ಸಂಖ್ಯೆ:47068ರನ್ವಯ ದಿನಾಂಕ:22.02.2012ರಂದು ವಸೂಲಿಸಿ ಸಂಸ್ಥೆಯ ನಿಧಿಗೆ ಜಮೆ ಮಾಡಲಾಗಿದೆ. ಕಂಡಿಕೆ ಕೈ ಬಿಡಲು ಕೋರಿದೆ.</td>
<td></td>
<td></td>
</tr>
</table>



PDF created with pdfFactory trial version www.pdffactory.com

| | | | | |
|---|---|---|---|---|
| | 4 37104/12–11–2009 3250 1625 1625<br>ಒಟ್ಟು 2530<br>ಕರಗಳು<br>5 35147/24–02–2010 365 315 50<br>6 ಜಮಾ ಮಾಡುವಾಗ ತಪ್ಪು<br>ಕೂಡಿಕೆಯಿಂದ ವ್ಯತ್ಯಾಸ -- -- 240<br>ಒಟ್ಟು 2820<br>ಸಂಬಂಧಿಸಿದವರಿಂದ ವಸೂಲಿಸಿ ಜಮಾ ಮಾಡಲು ಸೂಚಿಸಿ ಹಾಗೂ ಸಂಬಂಧಿಸಿದವರಿಗೆ ಈ ರೀತಿ ಇನ್ನು ಮುಂದೆ ವಸೂಲಿ ಹಣವನ್ನು ವ್ಯತ್ಯಾಸವಾಗದಂತೆ ನೋಡಿಕೊಳ್ಳಲು ಸೂಚಿಸಲಾಗಿದೆ. | | | |
| 21 | **ವಸೂಲಿಸಿದ ಹಣವನ್ನು ತಡವಾಗಿ ಇರಸಲು ಮಾಡಿರುವ ಬಗ್ಗೆ**<br>2009–10ನೇ ಸಾಲಿನಲ್ಲಿ ಹಂಪಿ ವಿಶ್ವವಿದ್ಯಾಲಯದಲ್ಲಿ ರಸೀದಿ ಪುಸ್ತಕದನ್ವಯ ವಸೂಲಿಸಿದ ಹಣವನ್ನು ಬ್ಯಾಂಕ್ ಖಾತೆಗೆ ತಡವಾಗಿ ಜಮಾ ಮಾಡಿರುವುದು ಕಂಡುಬಂದಿದ್ದು ವಿವರಗಳು ಈ ಕೆಳಕಂಡಂತೆ ಇರುತ್ತದೆ<br><br>**ವಿವರ** **ಜಮಾಮಾಡಿದ ಮೊತ್ತ/ದಿನಾಂಕ**<br>2009–10ನೇ ಸಾಲಿನಲ್ಲಿ ರಸೀದಿನ್ವಯ ರೂ.150000/13–07–2010<br>ವಸೂಲಿ ಮೊತ್ತವನ್ನು 2010–11ನೇ ರೂ.195000/23–07–2010<br>ಜಮಾ ಮಾಡಲಾಗಿದೆ ರೂ.40000/26–08–2010<br>ಈ ಮೇಲ್ಕಂಡ ಮೊತ್ತ ರೂ.384309–00ಗಳನ್ನು ವಸೂಲಿಸಿದ ದಿನ ಆದಾಯ ಮರುದಿನ ಬ್ಯಾಂಕಿಗೆ ಜಮಾ ಮಾಡಬೇಕಾಗಿದ್ದು, ಆದರೆ ತಡವಾಗಿ ಜಮಾ ಆಗಿರುತ್ತದೆ. ಕಾರಣ ಈ ರೀತಿ ಇನ್ನು ಮುಂದೆ ಅಸ್ಪದ ನೀಡದೇ ಕ್ರಮವಹಿಸಲು ಸೂಚಿಸಿದೆ. | ವಸೂಲಿಸಿದ ಮೊತ್ತವನ್ನು ಅದೇ ದಿನದಂದು ಬ್ಯಾಂಕಿಗೆ ಜಮೆ ಮಾಡಲು ಕ್ರಮಕೈಗೊಳ್ಳಲಾಗುವುದು. | | |
| 22 | **ಇಂಧನ ವೆಚ್ಚದ ಬಗ್ಗೆ**<br>2009–10ನೇ ಸಾಲಿನ ಲೆಕ್ಕತಪಾಸಣಾ ಸಮಯದಲ್ಲಿ ಕೆಳಕಂಡಂತೆ ವಾಹನಗಳು (ವಿಶ್ವವಿದ್ಯಾಲಯ)ನಿರ್ವಹಣೆ ಮಾಡುತ್ತಿದ್ದು ಕೆಳಕಂಡ ವಾಹನಗಳ ಲಾಗ್ ಪುಸ್ತಕ | ಪ್ರಸಕ್ತ 2009–10ನೇ ಸಾಲಿನಲ್ಲಿ ಇಂಧನ ವೆಚ್ಚಕ್ಕಾಗಿ ವೆಚ್ಚಭರಿಸುವ ಮೊತ್ತವನ್ನು ಪೂರ್ತಿಯಾಗಿ ಆಕ್ಷೇಪಣೆ ಇಡಲಾಗಿದ್ದು ಕಂಡುಬರುತ್ತದೆ. ವಾಹನಗಳಲ್ಲದೇ ಇಂಧನವನ್ನು ಜನರೇಟರ್‌ಗೆ ಸಹ ಉಪಯೋಗಿಸಲಾಗಿದೆ ಲಾಗ್ ಪುಸ್ತಕಗಳಲ್ಲಿ ಇಂಧನ ಬಳಕೆಯ ದಿನಾಂಕ ಹಾಗೂ ಪ್ರಯಾಣದ ಕಿ.ಮೀ. ಮತ್ತು ವಾಹನದ | | |



PDF created with pdfFactory trial version www.pdffactory.com

| | | | | |
|---|---|---|---|---|
| | ಹಾಜರುಪಡಿಸಿದ್ದು ವಿವರ ಕೆಳಗಿನಂತಿದೆ.<br><br>**ಹಾಜರುಪಡಿಸದ ಲಾಗ್ ಪುಸ್ತಕದ ವಿವರ**<br>**ಹಾಜರು ಪಡಿಸದೇ ಇರುವ ಲಾಗ್ ಪುಸ್ತಕದ ವಿವರ**<br>ವಾಹನಸಂಖ್ಯೆ ಕೆ.ಎ.35 3540 ಕೆ.ಎ.35, 1535<br>ವಾಹನಸಂಖ್ಯೆ ಕೆ.ಎ.35 4061 ಕೆ.ಎ.35, ಎಂ.603<br>ವಾಹನಸಂಖ್ಯೆ ಕೆ.ಎ.35 1363<br>ವಾಹನಸಂಖ್ಯೆ ಕೆ.ಎ.35 3748<br>ವಾಹನಸಂಖ್ಯೆ ಕೆ.ಎ.35 3914<br>ವಾಹನಸಂಖ್ಯೆ ಕೆ.ಎ.35 3964<br>ಹಾಜರುಪಡಿಸಿದ ಲಾಗ್ ಪುಸ್ತಕಗಳ ವಿವರ ಪರಿಶೀಲಿಸಿದಾಗ ಕರ್ನಾಟಕ ಆರ್ಥಿಕ ಸಂಹಿತೆ ಪರಿಚ್ಛೇದ 174ರ ಅನುಸಾರ ಲಾಗ್ ಪುಸ್ತಕಗದಲ್ಲಿ ಪ್ರವಾಸ ಮಾಡಿದ ಉದ್ದೇಶದ ವಿವರ ದಾಖಲಿಸಿಲ್ಲ. ಇದರಿಂದ ಪ್ರಯಾಣದ ಉದ್ದೇಶದ ಮಾಹಿತಿ ತಿಳಿಯಲು ಸಾಧ್ಯವಾಗಿಲ್ಲ.<br><br>ಸಾದಿಲ್ವಾರು ವೆಚ್ಚದ ಕೈಪಿಡಿ 1958 ನಿಯಮ 40(4)ಬಿರಲ್ಲಿ ಸೂಚಿಸಿದಂತೆ, ನಿಯಂತ್ರಣಾಧಿಕಾರಿಗಳು ಲಾಗ್ ಪುಸ್ತಕದಲ್ಲಿರುವ ನಮೂದುಗಳನ್ನು ಪರಿಶೀಲಿಸಿದ ಬಗ್ಗೆ ದೃಢೀಕರಿಸಿಲ್ಲ.<br><br>ಲಾಗ್ಪುಸ್ತಕಗಳ ನಿರ್ವಹಣೆ ಅಸಮರ್ಪಕತೆಯಿಂದ ಕೂಡಿದ್ದು, ಇಂಧನ ಬಳಕೆಯವಿವರ ಸ್ಪಷ್ಟತೆಯಿಂದ ಕೂಡಿಲ್ಲ ಇದರಿಂದ ಪ್ರವಾಸದ ಉದ್ದೇಶ ಇಂಧನ ಬಳಕೆ ವಿವರಗಳು ಸ್ಪಷ್ಟವಾಗಿ ವಿವರಗಳು ನಮೂದು ಆಗುವವರೆಗೂ ಇಂದಿನ ಬಳಕೆ ಸಂಬಂಧ ವೆಚ್ಚ ಭರಿಸಿದ ಮೊತ್ತ ರೂ.613272-00 ಮೊತ್ತವನ್ನು ಆಕ್ಷೇಪಿಸಲಾಗಿದೆ. | ಉಪಯೋಗದ ಉದ್ದೇಶವನ್ನು ದಾಖಲಿಸಲಾಗಿದೆ. ಪ್ರತಿ ಲಾಗ್ ಪುಸ್ತಕದಲ್ಲಿ ಇಂಧನ ವಿನಿಯೋಗಿಸಿದ ಬಗ್ಗೆ ಘೋಷ್ವಾರದೊಂದಿಗೆ ಪ್ರತಿ ತಿಂಗಳ ದೃಢೀಕರಿಸಿದೆ. ಕಂಡಿಕೆ ಕೈಬಿಡಲು ಕೋರಿದೆ. | | |
| 23 | **ನಗದು ಪುಸ್ತಕ ನಿರ್ವಹಣೆ ಬಗ್ಗೆ**<br>2009-10ನೇ ಸಾಲಿನ ಲೆಕ್ಕ ತಪಾಸಣಾ ಸಮಯದಲ್ಲಿ ಹಾಜರುಪಡಿಸಿದ ಕೆಳಕಂಡ ನಗದು ಪುಸ್ತಕಗಳನ್ನು ಪರಿಶೀಲಿಸಿದಾಗ ನ್ಯೂನತೆ ಗಮನಿಸಲಾಗಿದೆ. ಹಾಗೂ ನಗದು ಪುಸ್ತಕ ನಿರ್ವಹಣೆ ಸಮರ್ಪಕತೆಯಿಂದ ಕೂಡಿದ ವಿವರ ಕೆಳಗಿನಂತಿದೆ.<br><br>**1.** ಸಾಮಾನ್ಯ ನಗದು ಪುಸ್ತಕ ವಿಚಾರಣೆ ಸಂಖ್ಯೆ 15 ದಿನಾಂಕ 27-10-2010 | ನಗದು ಪುಸ್ತಕಗಳನ್ನು ನಿರ್ವಹಿಸಲಾಗಿದೆ. ವರ್ಷದ ಅಂತ್ಯಕ್ಕೆ ಘೋಷ್ವಾರದೊಂದಿಗೆ ದೃಢೀಕರಿಸಿದೆ. | | |



PDF created with pdfFactory trial version www.pdffactory.com

| | | | | |
|---|---|---|---|---|
| | **2.** ದೂರ ಶಿಕ್ಷಣ ವಿಭಾಗಕ್ಕೆ ಸಂಬಂಧಿತ ನಗದು ಪುಸ್ತಕ ವಿಚಾರಣೆ ಸಂಖ್ಯೆ 12 ದಿನಾಂಕ 19–10–2010<br>**3.** ಪ್ರಸಾರಾಂಗ ವಿಭಾಗಕ್ಕೆ ಸಂಬಂಧಿತ ನಗದು ಪುಸ್ತಕ ವಿಚಾರಣೆ ಸಂಖ್ಯೆ 14 ದಿನಾಂಕ 20–10–2010<br>1. ಮೇಲ್ಕಂಡ ನಗದು ಪುಸ್ತಕಗಳನ್ನು ಪರಿಶೀಲಿಸಿದಾಗ ನಗದು ಪುಸ್ತಕದಲ್ಲಿ ದೈನಂದಿನ ಆರ್ಥಿಕ ವ್ಯವಹಾರದ ಜಮಾ ಮತ್ತು ಖರ್ಚುಗಳ ವ್ಯವಹಾರವನ್ನು ದೃಢೀಕರಿಸಿರುವುದಿಲ್ಲ.<br>2. ನಗದು ಪುಸ್ತಕದಲ್ಲಿ ತಿಂಗಳ ಅಂತ್ಯಕ್ಕೆ ಜಮಾ ಮತ್ತು ಖರ್ಚುಗಳ ಘೋಷ್ವಾರೆ ದಾಖಲಿಸಿ ಸದರಿ ಆರ್ಥಿಕ ವ್ಯವಹಾರವನ್ನು ಸೂಕ್ತವಾಗಿ ಸಹಿಯೊಂದಿಗೆ ದೃಢೀಕರಿಸಿರುವುದಿಲ್ಲ.<br>ಮೇಲ್ಕಂಡ ನ್ಯೂನತೆ ಸಂಬಂಧ ಲೆಕ್ಕ ತಪಾಸಣಾ ತಂಡ ಮೇಲೆ ಕಾಣಿಸಿದಂತೆ ವಿಚಾರಣೆ ಸಂಖ್ಯೆ 15, 12, 14ರಲ್ಲಿ ನೀಡಿದ್ದು ಸದರಿ ವಿಚಾರಣೆಗೆ ವಿಶ್ವವಿದ್ಯಲಯ ಮೂಲಕ ನಗದು ಪುಸ್ತಕದಲ್ಲಿನ ನ್ಯೂನತೆ ಸರಿಪಡಿಸಿ ಮರು ಹಾಜರುಪಡಿಸುವುದರಲ್ಲಿ ಅಥವಾ ಉತ್ತರಿಸುವ ಮೂಲಕ ಅನುಪಾಲನಾ ವರದಿ ಲೆಕ್ಕ ತಪಾಸಣೆಗೆ ವಿವರಣೆ ನೀಡಿರುವುದಿಲ್ಲ.<br>ಕರ್ನಾಟಕ ಆರ್ಥಿಕ ಸಂಹಿತೆ 1958 ಪರಿಚ್ಛೇದ 331ರ ಅನುಸಾರ ನಗದು ಪುಸ್ತಕ ನಿರ್ವಹಣೆಯನ್ನು ಸಮರ್ಪಕ ರೀತಿಯಲ್ಲಿ ನಿರ್ವಹಿಸಿರುವುದಿಲ್ಲ. ಇದರಿಂದ ಲೆಕ್ಕ ತಪಾಸಣೆ ವಿಶ್ವವಿದ್ಯಾಲಯ ಮೂಲಕ ಅನುಮೋದಿಸಿದ ವಾರ್ಷಿಕ ಜಮಾ ಖರ್ಚುಗಳನ್ನು ನಗದು ಪುಸ್ತಕದಲ್ಲಿನ ಜಮಾ ಖರ್ಚುಗಳ ತನಿಖೆ ಮಾಡಲು ಸಾಧ್ಯವಾಗಿಲ್ಲ. | | | |
| 24 | **ಕನ್ನಡ ವಿಶ್ವವಿದ್ಯಾಲಯ(ಹಂಪಿ ಮೂಲಕ ಖರೀದಿಸಿರುವ ಸಾಮಗ್ರಿಗಳಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಪಾಲಿಸದೇ ಇರುವ ಬಗ್ಗೆ**<br>2009–10ನೇ ಸಾಲಿನ ಲೆಕ್ಕ ತಪಾಸಣೆ ಸಮಯದಲ್ಲಿ ಹಾಜರುಪಡಿಸಿದ ಪಾವತಿ ಓಚರು ಹಾಗೂ ಕಡಿತ ಪರಿಶೀಲಿಸಿದಾಗ ವಿಶ್ವವಿದ್ಯಾಲಯಕ್ಕೆ ಅಗತ್ಯ ಬಿಳುವ ಸಾಮಗ್ರಿಗಳನ್ನು ಖರೀದಿಸುವಾಗ ಮೇಲ್ಕಂಡ ಪಾರದರ್ಶಕತೆ ಅಧಿನಿಯಮ 1999ರಲ್ಲಿ ನಿಬಂಧನೆ ಅನುಸಾರ | ವಸ್ತುಗಳು ಖರೀದಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮವನ್ನು ಪಾಲಿಸಲಾಗಿದೆ.<br>ಒಂದು ಲಕ್ಷದ ಮೊತ್ತಕ್ಕೆ ಮೀರದಿರುವುದರಿಂದ ಟೆಂಡರ್‌ನ್ನು ಕರೆದಿರುವುದಿಲ್ಲ. ಕೊಟೇಶನ್ ಮೂಲಕ ಸಾಮಗ್ರಿಗಳನ್ನು ಖರೀದಿಸಲಾಗಿದೆ. | | |



PDF created with pdfFactory trial version www.pdffactory.com

| | | | | |
|---|---|---|---|---|
| | ಖರೀದಿಸಿರುವುದಿಲ್ಲ. ವಿವರ ಈ ಕೆಳಗಿನಂತಿದೆ.<br><br>**ಕ್ರ.ಸಂ. ಚೆಕ್‌ಸಂಖ್ಯೆ/ದಿನಾಂಕ ಮೊತ್ತ**<br>**ಎ. ಕಂಪ್ಯೂಟರ್ ಖರೀದಿ ವಿವರ**<br>1. 999615/27-03-2010 51990-00<br>2 999606/26-03-2010 51990-00<br>3 9996/27-03-2010 51990-00<br>4 /27-03-2010 51990-00<br>5 002313/2-03-2010 44434-00<br>6 --- 29980-00<br>7 13-10-2009 41590-00<br>8 14-12-2009 45500-00<br>**ಒಟ್ಟು 369464-00**<br>**ಬಿ. ಪಿಠೋಪಕರಣ ಖರೀದಿ**<br>1 994963/03-06-2009 17750-00<br>2 994692/03-06-2009 40950-00<br>3 994960/28-05-2009 82688-00<br>4 994970/23-06-2009 35016-00<br>5 996460/31-03-2010 99000-00<br>**ಒಟ್ಟು 275404-00**<br>**ಸಿ. ಲೇಖನ ಸಾಮಗ್ರಿ**<br>1 997208/14-05-2009 330823-00<br>2 000375/17-12-2009 123420-00<br>ಒಟ್ಟು 454243<br>**ಡಿ.ಪ್ರಸಾರಾಂಗದ ಮೂಲಕ ಪುಸ್ತಕ ಹಾಗೂ ನಿಯತಕಾಲಿಕೆ ಮುದ್ರಣ** 1363587-00<br>ಮೇಲ್ಕಂಡ ಸಾಮಗ್ರಿ ಹಾಗೂ ಪುಸ್ತಕ ಹಾಗೂ ನಿಯತಕಾಲಿಕೆಗಳ ಮುದ್ರಣಗಳನ್ನು ನೇರವಾಗಿ | ಟೆಂಡರ್ ಕರೆದು ಲೇಖನ ಸಾಮಗ್ರಿಗಳನ್ನು ಚಿತ್ರಕಲಾ ವಿಭಾಗಕ್ಕಾಗಿ ಖರೀದಿಸಲಾಗಿದೆ. ಪಾರದರ್ಶಕತೆ ಅಧಿನಿಯಮದ ನಿಯಮಗಳನ್ನು ಅನುಸರಿಸಿ ಖರೀದಿಸಲಾಗಿದೆ.<br>ಪ್ರತಿ ಲಗತ್ತಿಸಿದೆ.<br><br>ಪ್ರಸಾರಾಂಗದ ಪುಸ್ತಕ ಮುದ್ರಣವನ್ನು ವಿವಿಧ ಖಾಸಗಿ ಮುದ್ರಣಾಲಯಗಳಿಂದ ಹಾಗೂ ಪ್ರಸಾರಾಂಗದ ಉನ್ನತ ಸಲಹಾ ಸಮಿತಿ ಸಭೆಯ ನಿರ್ಣಯಗಳನ್ವಯ ನಿಗದಿ ಪಡಿಸಿದ ದರದಂತೆ ಮುದ್ರಣ ವೆಚ್ಚವನ್ನು ಪಾವತಿಸಲಾಗಿದೆ.<br>ನೀಡಲಾದ ಮುದ್ರಣ ದರಗಳು ಬಹಳ ಕಡಿಮೆ ಇರುತ್ತದೆ. ಕಾರಣ ಆಕ್ಷೇಪಣೆ ಮೊತ್ತ ರೂ.2462698/-ಗಳನ್ನು ಕಂಡಿಕೆ ಕೈ ಬಿಡಲು ಕೋರಿದೆ. | | |



PDF created with pdfFactory trial version www.pdffactory.com

| | | | | |
|---|---|---|---|---|
| | ಖರೀದಿಸಲಾಗಿದೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಹಾಗೂ ಪುರಕ ನಿಯಮ 2000 ಅಧಿನಿಯಮ4(2)(II)ರಲ್ಲಿ ಸಾಮಗ್ರಿ ಖರೀದಿ ಅಥವಾ ಸೇವೆಗಳ ಮೌಲ್ಯ ರೂ.1ಲಕ್ಷ ಮೀರಿದಲ್ಲಿ ಪಾರದರ್ಶಕತೆ ಅಧಿನಿಯಮದ ನಿಬಂಧನೆ ಅನುಸಾರ ಟೆಂಡರ್ ಮೂಲಕ ಖರೀದಿಸಬೇಕು.<br><br>ಸದರಿ ಪಾರದರ್ಶಕತೆ ಅಧಿನಿಯಮದ ಅಧ್ಯಾಯ IIರ ಅಧಿನಿಯಮದಲ್ಲಿ ಅಧಿನಿಯಮದ ಪ್ರಾರಂಭ ದಿನಾಂಕದಿಂದ ಟೆಂಡರ್ ಹೊರುಪಡಿಸಿ ಇತರೆ ಯಾವುದೇ ಪ್ರಕ್ರಿಯೆ ಮೂಲಕ ಸಾಮಗ್ರಿ ಅಥವಾ ಸೇವೆಗಳನ್ನು ಪಡೆಯುವುದನ್ನು ನಿಷೇಧಿಸಲ್ಪಟ್ಟಿದೆ. ಆದರೆ ಮೇಲ್ಕಂಡ ಖರೀದಿ ಪ್ರಕರಣದಲ್ಲಿ ಪಾರದರ್ಶಕತೆ ಅಧಿನಿಯಮದ ನಿಬಂಧನೆಗಳ ಅನುಸಾರ ಖರೀದಿಸಿದ ನೇರವಾಗಿ ಖರೀದಿಸಿರುವುದರಿಂದ ಸದರಿ ಮೊತ್ತ ರೂ.2462698–00ಗಳನ್ನು ಆಕ್ಷೇಪಿಸಲಾಗಿದೆ.<br><br>ವಿಶ್ವವಿದ್ಯಾಲಯದ ಮೂಲಕ ಸಾಮಗ್ರಿ ಖರೀದಿ ಅಥವಾ ಸೇವೆ ಪಡೆಯುವ ಸಂದರ್ಭದಲ್ಲಿ ಅಧೀನ ವಿಭಾಗಗಳಿಂದ ಅಗತ್ಯ ಬಿಳುವ ಸಾಮಗ್ರಿ ಅಥವಾ ಸೇವೆಗಳ ಬೇಡಿಕೆ ಪಟ್ಟಿ ತಯಾರಿಸಿ ಯೋಜನೆ ರೂಪಿಸಿ ಸಾಮಗ್ರಿ ಅಥವಾ ಸೇವೆ ಪಡೆಯುವ ಅಂದಾಜು ಮೌಲ್ಯ ರೂ.1 ಲಕ್ಷ ಮೀರಿದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಹಾಗೂ ಪೂರಕ ಅಧಿನಿಯಮ 2000ರಲ್ಲಿ ನಿರ್ದಿಷ್ಟಗೊಳಿಸಿರುವ ನಿಬಂಧನೆಗಳ ಅನುಸಾರ ಖರೀದಿಸಲು ಸೂಚಿಸಿದೆ. | | | |
| 25 | **ಕನ್ನಡ ವಿಶ್ವವಿದ್ಯಾಲಯ ವಿವಿಧ ಖರ್ಚುಗಳ ಭರಿಸುವ ಸಂಬಂಧ ಮುಂಗಡ ನೀಡಿರುವ ಬಗ್ಗೆ**<br>2009–10ನೇ ಸಾಲಿನಲ್ಲಿ ಲೆಕ್ಕ ತಪಾಸಣೆಗೆ ಹಾಜರು ಪಡಿಸಿದ ವಿವರ ಹಾಗೂ ವಿಶ್ವವಿದ್ಯಾಲಯದ ಮೂಲಕ ನೀಡಿದ ವಿವರ ಅನುಸಾರ ವಿವಿಧ ಉದ್ದೇಶಕ್ಕಾಗಿ ನೀಡಿದ ಮುಂಗಡಗಳಲ್ಲಿ ಪೂರ್ತಿ 2010ರ ಅಂತ್ಯಕ್ಕೆ ಹೊಂದಾಣಿಕೆಯಾಗದೆ ಕೆಳಕಂಡಂತೆ ಬಾಕಿ ಉಳಿಸಿಕೊಳ್ಳಲಾಗಿದೆ. ವಿವರ ಈ ಕೆಳಗಿನಂತಿದೆ.<br><br>**ಕ್ರ.ಸಂ. ಮುಂಗಡದ ವಿವರ 30–03–2010ಕ್ಕೆ ಹೊಂದಾಣಿಕೆಯಾಗದೆ** | ಬಾಕಿ ಇರುವ ಮುಂಗಡಗಳ ಲೆಕ್ಕ ಹೊಂದಾಣಿಕೆ ಮಾಡಿಕೊಳ್ಳಲಾಗಿದೆ. ಮುಂಗಡ ರಜಿಸ್ಟರ್‌ನಲ್ಲಿ ಸೂಕ್ತವಾಗಿ ದಾಖಲಿಸಿ ದೃಢೀಕರಿಸಲಾಗಿದೆ. ಹೊಂದಾಣಿಕೆಯ ವಿವರ ಮುಂಗಡ ರಿಜಿಸ್ಟರಿನ ಕ್ರಮ ಸಂಖ್ಯೆ ಹೊಂದಾಣಿಕೆ ದಿನಾಂಕವನ್ನು ದಾಖಲಿಸಲಾಗಿದೆ. | | |



PDF created with pdfFactory trial version www.pdffactory.com

| | | | | |
|---|---|---|---|---|
| | **ಬಾಕಿ ಉಳಿದುಕೊಂಡಿರುವ ಮೊತ್ತ**<br>1. ಸಾಮಾನ್ಯ ಮುಂಗಡ 6471308–00<br>2. ಪ್ರಸಾರಾಂಗದ ಮುಂಗಡ 222400–00<br>3. ದೂರಶಿಕ್ಷಣ ಮುಂಗಡ 3930319–00<br>4. ಕನ್ನಡ ಶಾಸ್ತ್ರೀಯ ಭಾಷೆ 3318118–00<br>**ಒಟ್ಟು 13942145–00**<br>ಮೇಲ್ಕಂಡ ಬಾಕಿ ಉಳಿದ ಮುಂಗಡದ ಸಂಬಂಧ ಲೆಕ್ಕ ತಪಾಸಣಾ ವಿಚಾರಣೆ ಸಂಖ್ಯೆ 13/20–10–2010ರಂದು ನೀಡಿದ್ದು ಸದರಿ ಮುಂಗಡಗಳ ಹೊಂದಣಿಯಾದ ವಿವರ ಹಾಗೂ ಓಚರುಗಳನ್ನು ಲೆಕ್ಕ ತಪಾಸಣೆಗೆ ಹಾಜರುಪಡಿಸಿಲ್ಲ. ಇದರಿಂದ ಸದರಿ ಸಂಬಂಧದ ವೆಚ್ಚದ ವಿವರ ಪರಿಶೀಲಿಸಲು ಸಾಧ್ಯವಾಗಿಲ್ಲ.<br>ಕರ್ನಾಟಕ ಆರ್ಥಿಕ ಸಂಹಿತೆ 1958ರ ಪರಿಚ್ಛೇದ 243ರಲ್ಲಿ ಮುಂಗಡ ನೀಡಿದ ತಿಂಗಳ ತುರವಾಯ ಬರುವ ತಿಂಗಳ ಕೊನೆಯೊಳಗೆ ಹೊಂದಾಣಿಕೆಯಾಗತಕ್ಕದ್ದು, ಒಂದು ವೇಳೆ ನೀಡಿದ ಮುಂಗಡ ಮೇಲೆ ತಿಳಿಸಿದಂತೆ ನಿರ್ದಿಷ್ಟ ಅವಧಿಯಲ್ಲಿ ಹೊಂದಣಿಕೆಯಾಗದಿದ್ದಲ್ಲಿ ಅವಧಿಯ ಹೆಚ್ಚಳಕ್ಕೆ ಮಂಜೂರಾತಿ ಪಡೆಯಲು ಸೂಚಿಸಲ್ಪಟ್ಟಿದೆ. ಆದರೆ ವಿಶ್ವವಿದ್ಯಾಲಯದ ಮೂಲಕ ನೀಡಿದ ಮುಂಗಡಗಳ ವಿವರ ಪರಿಶೀಲಿಸಿದಾಗ ಸುಮಾರು 6,8,10 ತಿಂಗಳಿಂದ ಹೊಂದಾಣಿಕೆಯಾಗದೆ ಬಾಕಿ ಉಳಿದುಕೊಂಡಿರುವುದು ದೃಢಪಟ್ಟಿದೆ.<br>ಕರ್ನಾಟಕ ಸರ್ಕಾರದ ಸಚಿವಾಲಯದ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಪತ್ರ ಸಂಖ್ಯೆ ಇಡಿ/77/ಯುಎಸ್/3/92/18–01–1994ರಂದು ಹೊರಡಿಸಿದ ಪತ್ರದಲ್ಲಿ ಆರ್ಥಿಕ ಹಾಗೂ ಆಡಳಿತಾತ್ಮಕ ಅಧಿಕಾರಗಳನ್ನು ವಿಶ್ವವಿದ್ಯಾಲಯದ ಆಡಳಿತ ಮಂಡಳಿಯೇ ತೀರ್ಮಾನಿಸಬಹುದೆಂದು ನಿರ್ದೇಶಿಸಲಾಗಿದೆ.<br>ಕನ್ನಡ ವಿಶ್ವವಿದ್ಯಾಲಯ, ಹಂಪಿ ಇದರ ಆರ್ಥಿಕ ಹಾಗೂ ಆಡಳಿತಾತ್ಮಕ ಅಧಿಕಾರದ ವಿವರಗಳನ್ನು ಪರಿಶೀಲಿಸಿದಾಗ ಸದರಿ ಆರ್ಥಿಕ ಸ್ವರೂಪದ ಕ್ರಮಸಂಖ್ಯೆ 16ರಲ್ಲಿ ಪ್ರಯಾಣ ವೆಚ್ಚದ ಮುಂಗಡಗಳಿಗೆ ಹಾಗೂ ಆಡಳಿತಾತ್ಮಕ ಅಧಿಕಾರದ ಕ್ರ.ಸಂ.37ರಲ್ಲಿ ವರ್ಗಾವಣೆ | ಇನ್ನು ಮುಂದೆ ಮುಂಗಡ ನೀಡಲಾದ ಮೊತ್ತಕ್ಕೆ ಲೆಕ್ಕ ಹೊಂದಾಣಿಕೆಯನ್ನು ಒಂದು ತಿಂಗಳೊಳಗಾಗಿ ಸಲ್ಲಿಸಲು ಆಯಾ ವಿಭಾಗದ ಮುಖ್ಯಸ್ಥರಿಗೆ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲಾಗಿದೆ.<br><br>ಆದಾಗ್ಯೂ ಮುಂಗಡಗಳ ಲೆಕ್ಕ ಹೊಂದಾಣಿಕೆಯ ಪ್ರಕ್ರಿಯೆ ಕೈಕೊಳ್ಳಲಾಗಿದೆ. ಕಾರಣ ಆಕ್ಷೇಪಣೆ ಮೊತ್ತ ಕೈ ಬಿಡಲು ಕೋರಿದೆ. | | |



PDF created with pdfFactory trial version www.pdffactory.com

| | | | | |
|---|---|---|---|---|
| | ಮುಂಗಡ ನೀಡುವ ಸಂಬಂಧ ಮಾತ್ರ ಅವಕಾಶ ಕಲ್ಪಿಸಿ ವಿಶ್ವವಿದ್ಯಾಲಯ ಕಾರ್ಯಕಾರಿ ಸಮಿತಿ ಹಾಗೂ ಆಡಳಿತ ಮಂಡಳಿ ಸಭೆಯಲ್ಲಿ ಅನುಮೋದಿಸಿಕೊಳ್ಳಲಾಗಿದೆ. ವಿಶ್ವವಿದ್ಯಾಲಯ ಖರ್ಚುಗಳಿಗೆ ಸಂಬಂಧಿಸಿದಂತೆ ಮುಂಗಡ ನೀಡುವ ಬಗ್ಗೆ ಅಧಿಕಾರದಲ್ಲಿ ಪ್ರಸ್ತಾಪಿಸಿರುವುದಿಲ್ಲ. ಹೀಗಿರುವಾಗ ಬೃಹತ್ ಮೊತ್ತದ ಮುಂಗಡಗಳನ್ನು ನಿರ್ದಿಷ್ಟ ಖರ್ಚುಗಳಿಗೆ ಮಂಜೂರಾತಿ ನೀಡಿ ವರ್ಷಗಟ್ಟನೆ ಹೊಂದಾಣಿಕೆಯಾಗದೆ ಉಳಿದುಕೊಂಡಿರುವುದು ನಿಯಮ ಬಾಹಿರ ಕ್ರಮವಾಗಿದ್ದು ಈ ಮೂಲಕ ಆರ್ಥಿಕ ನಿಯಮಗಳ ಕಟ್ಟುನಿಟ್ಟಿನ ಪರಿಪಾಲನೆ ಹಾಗೂ ಈ ಸಂಬಂಧ ವಿಶ್ವವಿದ್ಯಾಲಯದ ಅಧಿನಿಯಮ 1991ರ ಹಣಕಾಸು ಸಮಿತಿ 8ಸಿ ರಲ್ಲಿ ಸೂಚಿಸಿದಂತೆ ವಿಶ್ವವಿದ್ಯಾಲಯದ ಲೆಕ್ಕ ಪತ್ರಗಳು ನಿರ್ವಹಣೆ ಮತ್ತು ಪ್ರಕ್ರಿಯೆಗಳಿಗೆ ಸದರಿ ಮುಂಗಡ ನೀಡುವ ಸಂಬಂಧ ಕಟ್ಟುನಿಟ್ಟಿನ ನಿಯಮ ರೂಪಿಸಿ ಅನುಮೋದಿಸಿಕೊಳ್ಳಲು ಸೂಚಿಸಿದೆ.<br>ಮೇಲ್ಕಂಡ ಮುಂಗಡ ನೀಡಿದ ಸಂಬಂಧ ಹೊಂದಾಣಿಕೆಯಾದ ಓಚರು ವಿವರ ಅಥವಾ ಮುಂಗಡ ಪಡೆದ ವಿವಿಧ ಇಲಾಖೆಗಳ ಮುಖ್ಯಸ್ಥರು, ಪಡೆದ ಮುಂಗಡ ಮೊತ್ತ ವಿಶ್ವವಿದ್ಯಾಲಯದ ನಿಧಿಗೆ ಮರುಭರಿಕೆ ಮಾಡಿದಲ್ಲಿ ಸದರಿ ಮೊತ್ತಗಳ ವಿವರ ಲೆಕ್ಕ ತಪಾಸಣೆಗೆ ಹಾಜರುಪಡಿಸುವವರೆಗೂ ರೂ.13942145-00ಗಳನ್ನು ಆಕ್ಷೇಪಿಸಲಾಗಿದೆ. | | | |
| 26 | **ವಿಶ್ವವಿದ್ಯಾಲಯ ಆಡಳಿತಾತ್ಮಕ ಮತ್ತು ಆರ್ಥಿಕ ಅಧಿಕಾರಗಳ ಬಗ್ಗೆ**<br>ಕರ್ನಾಟಕ ಸರ್ಕಾರದ ಸಚಿವಾಲಯ ಪತ್ರ ಸಂಖ್ಯೆ ಇಡಿ/77/ಯುಎಸ್ಐ/92, ದಿನಾಂಕ 18/20-01-1994ರಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ ಬರೆದ ಪತ್ರದಲ್ಲಿ ಆಡಳಿತಾತ್ಮಕ ಹಿತದೃಷ್ಟಿಯಿಂದ ಆಡಳಿತಾತ್ಮಕ ಅಧಿಕಾರಗಳು ಮತ್ತು ಆರ್ಥಿಕ ಅಧಿಕಾರಗಳನ್ನು ಪ್ರತಿಯೋಜನೆ ಅಧಿಕಾರವನ್ನು ವಿಶ್ವವಿದ್ಯಾಲಯದ ಆಡಳಿತ ಮಂಡಳಿಯೇ ತೀರ್ಮಾನಿಸಬಹುದೆಂದು ನಿರ್ದೇಶಿಸಲಾಗಿದೆ. | ತಮ್ಮ ನಿರ್ದೇಶನದನ್ವಯ ನಿಯಮವನ್ನು ಅನುಸರಿಸಲಾಗುವುದು.<br>ಈ ವಿಶ್ವವಿದ್ಯಾಲಯದಲ್ಲಿ 15 ಅಧ್ಯಯನ ವಿಭಾಗಗಳು ಹಾಗೂ 4 ಅಧ್ಯಯನ ಕೇಂದ್ರಗಳನ್ನು ಒಳಗೊಂಡಿರುತ್ತದೆ. ಹಾಗೂ ದೂರಶಿಕ್ಷಣ ಕೇಂದ್ರ, ಪ್ರಸಾರಾಂಗ ಇವು ಸಹ ಇರುತ್ತವೆ. ಎಂ.ಫಿಲ್, ಪಿ.ಎಚ್‌ಡಿ ಹಾಗೂ ಡಿಲಿಟ್ ಪದವಿಯ ಸಂಶೋಧನ ಚಟುವಟಿಕೆಗಳನ್ನು ಸಂಯೋಜಿಸುವುದಲ್ಲದೆ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯ ವಿಶಿಷ್ಟ ಕ್ಷೇತ್ರದಲ್ಲಿ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿ | | |



PDF created with pdfFactory trial version www.pdffactory.com

| | | | | |
|---|---|---|---|---|
| | ಕನ್ನಡ ವಿಶ್ವವಿದ್ಯಾಲಯ ಸಿದ್ಧಪಡಿಸಿದ ಆಡಳಿತಾತ್ಮಕ ಮತ್ತು ಆರ್ಥಿಕ ಅಧಿಕಾರಗಳ ಕುರಿತು ದಿನಾಂಕ 29-04-1993ರ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಅನುಮೋದನೆ ಪಡೆದ ಬಗ್ಗೆ ಹಾಗೂ ದಿನಾಂಕ 27-08-1994ರಂದು ಪಡೆದ ಬಗ್ಗೆ ಕನ್ನಡ ವಿಶ್ವವಿದ್ಯಾಲಯದ ಆಡಳಿತಾತ್ಮಕ ಹಾಗೂ ಆರ್ಥಿಕ ಅಧಿಕಾರದ ಪ್ರತಿಯಲ್ಲಿ ಕಂಡುಬಂದಿದೆ.<br>ಮೇಲ್ಕಂಡಂತೆ ವಿವಿಧ ಖರ್ಚುಗಳಿಗೆ ನೀಡಿದ ಮಂಜೂರಾತಿ ಆದೇಶಗಳನ್ನು ಪರಿಶೀಲಿಸಿದಾಗ ಆರ್ಥಿಕ ಅಧಿಕಾರದ ಯಾವ ಸ್ವರೂಪದ ಅಡಿಯಲ್ಲಿ ವೆಚ್ಚದ ಪ್ರಾಧಿಕಾರ ನೀಡಲಾಗಿದೆ. ಹಾಗೂ ಅನುಮೋದನೆಗೊಂಡ ಆಡಳಿತಾತ್ಮಕ ಹಾಗೂ ಆರ್ಥಿಕ ಅಧಿಕಾರದ ಕ್ರಮಸಂಖ್ಯೆ ನಿರ್ದಿಷ್ಟವಾಗಿ ಸೂಚಿಸುವ ಮೂಲಕ ಮಂಜೂರಾತಿ ನೀಡಲಾಗಿದೆ ಎಂಬುದು ಸ್ಪಷ್ಟಪಡಿಸಿಲ್ಲ ಉದಾಹರಣೆ: ವಿವಿಧ ವಿಭಾಗಗಳಿಗೆ ಖರ್ಚುಗಳ ಸಂಬಂಧ ನೀಡಿದ ಮುಂಗಡಗಳ ಬಗ್ಗೆ ಯಾವ ಅಧಿಕಾರ ಚಲಾಯಿಸಿ ಸದರಿ ಮುಂಗಡ ನೀಡಲಾಗಿದೆ ಎಂಬ ವಿವರಣೆ ಮಂಜೂರಾತಿ ಆದೇಶದಲ್ಲಿ ಲಭ್ಯವಿಲ್ಲ. ಇದಿರಿಂದ ಮೇಲ್ಕಂಡ ಸರ್ಕಾರಿ ಪತ್ರ ದಿನಾಂಕ 18-01-1994ರ ಪತ್ರದ ಅನುಸಾರ ವಿಶ್ವವಿದ್ಯಾಲಯ ಮಟ್ಟದಲ್ಲಿ ಅನುಮೋದಿನೆಗೊಂಡಿರುವ ಆರ್ಥಿಕ ಅಧಿಕಾರದ ಬಳಕೆ ಸಮರ್ಪಕವಾಗಿ ಬಳಸಿಕೊಳ್ಳಲಾಗಿದೆ ಎಂಬ ಬಗ್ಗೆ ತಿಳಿಯಲು ಸಾಧ್ಯವಾಗಿಲ್ಲ.<br>ಸದರಿ ನ್ಯೂನತೆ ಸಂಬಂಧ ಲೆಕ್ಕ ತಪಾಸಣೆ ವಿಚಾರಣೆ ಸಂಖ್ಯೆ 11, ದಿನಾಂಕ 17-09-2010ರ ಮೂಲಕ ನೀಡಿದ್ದು ಸದರಿ ವಿಚಾರಣೆಗೆ ವಿಶ್ವವಿದ್ಯಾಲಯದ ಮೂಲಕ ಯಾವುದೇ ಸ್ಪಷ್ಟೀಕರಣ ನೀಡಿಲ್ಲ. ವೆಚ್ಚಕ್ಕೆ ಸಂಬಂಧಿಸಿದ ಮಂಜೂರಾತಿ ಆದೇಶ ನೀಡುವಾಗ ಪ್ರದತ್ತವಾದ ಅಧಿಕಾರ ಚಲಾಯಿಸುವ ಕುರಿತು ಸೂಕ್ತ ವಿಚಾರಣಾತ್ಮಕ ಆದೇಶ ಅಗತ್ಯವಿದೆ. ಇದರಿಂದ ವಿಶ್ವವಿದ್ಯಾಲಯ ಚಲಾಯಿಸುವ ಆರ್ಥಿಕ ಅಧಿಕಾರದ ವ್ಯಾಪ್ತಿ ಬಳಕೆ ಮಾಡಿದ ಬಗ್ಗೆ ಖಚಿತ ವಿವರ ತಿಳಿಯಲು ಸಾಧ್ಯವಾಗುತ್ತದೆ. | ಡಿಪ್ಲೋಮಾಗಳನ್ನು ನಡೆಸಲಾಗುತ್ತದೆ. ಜೊತೆಗೆ ಸಂಶೋಧನಾ ವಿದ್ಯಾರ್ಥಿಗಳಿಗೆ ಕಾರ್ಯಗಾರ, ವಿಚಾರ ಸಂಕಿರಣ, ಉಪನ್ಯಾಸ, ಕಮ್ಮಟ ಶಿಬಿರ, ಸಂಶೋಧನೆ ಸಮಾವೇಶ, ಚರ್ಚೆ, ಸಂವಾದಗಳನ್ನು ನಡೆಸಲಾಗುತ್ತದೆ. ಈ ಮೇಲಿನ ಕಾರ್ಯಕ್ರಮಕ್ಕೆ ಆಗಮಿಸುವ ವಿದ್ವಾಂಸರಿಗೆ ಪ್ರಯಾಣಭತ್ಯೆ, ಸಭಾಭತ್ಯೆ, ಊಟೋಪಚಾರದ ವ್ಯವಸ್ಥೆ ಮಾಡಲಾಗುತ್ತದೆ. ಈ ಕಾರಣದಿಂದಾಗಿ ಮುಂಗಡ ನೀಡುವುದು ಅನಿವಾರ್ಯವಾಗಿದೆ. ಈ ಕುರಿತು ಕಾರ್ಯಕಾರಿ ಸಮಿತಿ ಸಭೆಯಲ್ಲಿ ಚರ್ಚಿಸಿ ನಿಯಮ ರೂಪಿಸಿ ಅನುಮೋದಿಸಿಕೊಳ್ಳಲಾಗುವುದು. | | |
| 27 | **ಹಿರಿಯ ಹಾಗೂ ಕಿರಿಯ ನೌಕರರ ಮೇಲಿನ ವ್ಯತ್ಯಾಸ ಸರಿಪಡಿಸಿದ ಬಗ್ಗೆ(ಸೋಮನಾಥ ಎಚ್.ಎಂ.ಇತರರು)**<br>ಸಿಬ್ಬಂದಿಗಳಾದ ಸೋಮನಾಥ ಎಚ್.ಎಂ., ಸತ್ಯನಾರಾಯಣ ಶೆಟ್ಟಿ, ಕಿರಿಯ ಸಹಾಯಕರು, | ಸಿಬ್ಬಂದಿಗಳ ವಾರ್ಷಿಕ ಬಡ್ತಿ ದಿನಾಂಕಗಳನ್ನು ಪುನರ್ ಪರಿಶೀಲಿಸಿದೆ. ಹಾಗೂ | | |



PDF created with pdfFactory trial version www.pdffactory.com

<table>
<tr>
<td></td>
<td>ಗಣೇಶ ಯಾಜಿ, ಫೋಟೋಗ್ರಾಫರ್, ನರೆಗೆಲ್ಲಪ್ಪ ಪೂಜಾರಿ, ತಿಂದಪ್ಪ ಮೂಲಿಮನಿ ಜವಾನ ಇವರುಗಳ ಸೇವಾ ಪುಸ್ತಕ ಪರಿಶೀಲಿಸಲಾಗಿ ನಿಯತಕಾಲಿಕೆ ವಾರ್ಷಿಕ ವೇತನ ಬಡ್ತಿಗಳನ್ನು ಪ್ರತಿವರ್ಷ ಸೆಪ್ಟೆಂಬರ್ ತಿಂಗಳಲ್ಲಿ ಪಡೆಯುತ್ತಿದ್ದು ಇವರಿಗಿಂತ ಕಿರಿಯ ನೌಕರರು ಏಪ್ರಿಲ್ ತಿಂಗಳಲ್ಲಿ ವಾರ್ಷಿಕ ವೇತನ ಬಡ್ತಿ ಪಡೆಯುತ್ತಿದ್ದುದರಿಂದ ವೇತನ ತಾರತಮ್ಯ ಉಂಟಾಗಿರುವುದರಿಂದ ಇವರುಗಳ ನಿಯತಕಾಲಿಕೆ ವಾರ್ಷಿಕ ವೇತನ ಬಡ್ತಿಗಳನ್ನು ಸೆಪ್ಟೆಂಬರ್ ತಿಂಗಳ ಬದಲಾಗಿ ಏಪ್ರಿಲ್ ತಿಂಗಳಿಗೆ ಅಂದರೆ ದಿನಾಂಕ 01–09–2009ಕ್ಕೆ ವಾರ್ಷಿಕ ವೇತನ ಬಡ್ತಿಯನ್ನು ನೀಡಿ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ದಿನಾಂಕ 01–09–2009ಕ್ಕೆ ನೀಡುವ ಬದಲಾಗಿ ದಿನಾಂಕ 01–04–2010ಕ್ಕೆ ನಿರ್ಧರಿಸಿ ವೇತನ ನಿಗದಿಗೊಳಿಸಿರುವುದು ಕಂಡುಬಂದಿರುತ್ತದೆ. ಈ ರೀತಿಯಾಗಿ ಈ ಮೇಲಿನ ನೌಕರರ ನಿಯತಕಾಲಕೆ ವೇತನ ಬಡ್ತಿಗಳ ದಿನಾಂಕ ಬದಲಾಯಿಸಿರುವುದಕ್ಕೆ ಯಾವುದೇ ಆದೇಶಗಳನ್ನು ಉಲ್ಲೇಖಿಸಿರುವುದಿಲ್ಲ. ಹಾಗೂ ಹಿರಿಯ ಹಾಗೂ ಕಿರಿಯ ನೌಕರರು ಯಾರು ಮತ್ತು ಅವರ ಸೇವಾ ವಿವರಗಳ ಬಗ್ಗೆ ಸಂಪೂರ್ಣ ಮಾಹಿತಿ ನೀಡಿರುವುದಿಲ್ಲ. ಆದುದರಿಂದ ಸದರಿ ಸಿಬ್ಬಂದಿಯ ವಾರ್ಷಿಕ ಬಡ್ತಿ ದಿನಾಂಕವನ್ನು ಪರಿಷ್ಕರಿಸುವ ಬಗ್ಗೆ ಪುನರ್ ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳಲು ಸೂಚಿಸಿದೆ.</td>
<td>ಸೇವಾ ಪುಸ್ತಕದಲ್ಲಿ ಸೂಕ್ತವಾಗಿ ನಮೂದಿಸಿದೆ.<br>ಸರ್ಕಾರಿ ಆದೇಶ ಸಂಖ್ಯೆ: ಎಫ್.ಡಿ/17/ಎಸ್.ಆರ್.ಪಿ 2007 ಬೆಂಗಳೂರು ದಿನಾಂಕ:16.05.2007ರ ನಿಯಮ ಉಪನಿಯಮ 8ರಲ್ಲಿ ಉಲ್ಲೇಖಿಸಿದಂತೆ ಕಿರಿಯ ನೌಕರರ ವೇತನ ಹಂತಕ್ಕೆ ಹಿರಿಯ ನೌಕರರ ವೇತನ ನಿಗದಿಗೊಳಿಸಿ ಪರಿಷ್ಕೃತಗೊಳಿಸಲಾಗಿದೆ.</td>
<td></td>
<td></td>
</tr>
<tr>
<td>28</td>
<td>ಮಹೇಶ ಉಣಕಲ್ಲು, ಕಾಶಿವಿಶ್ವನಾಥ ಪತ್ರಾಂಕಿತ ವ್ಯವಸ್ಥಾಪಕರು ಇವರ ವೇತನ ಪುನರ್ ನಿಗದಿಪಡಿಸಿದ ಬಗ್ಗೆ<br>ಮಹೇಶ ಉಣಕಲ್ಲು ಮತ್ತು ಕಾಶಿ ವಿಶ್ವನಾಥ ಪತ್ರಾಂಕಿತ ವ್ಯವಸ್ಥಾಪಕರು, ಇವರ ಸೇವಾ ಪುಸ್ತಕ ಪರಿಶೀಲಿಸಲಾಗಿ ಸದರಿ ನೌಕರರು ದಿನಾಂಕ 01–09–2008ಕ್ಕೆ ನಿಯತಕಾಲಿಕೆ ವಾರ್ಷಿಕ ವೇತನ ಬಡ್ತಿ ಪಡೆದ ನಂತರ ರೂ.13350–00ಗಳ (ರೂ.11400–14400ಗಳ ವೇತನ ಶ್ರೇಣಿಯಲ್ಲಿ) ಮೂಲ ವೇತನ ಪಡೆಯುತ್ತಿದ್ದರು. ಇವರುಗಳ ಹಿರಿಯ ನೌಕರರಾಗಿದ್ದು ಕಿರಿಯ ನೌಕರರಿಗಿಂತ ಕಡಿಮೆ ವೇತನ ಪಡೆಯುತ್ತಿದ್ದರು ಎಂಬ ಕಾರಣದ ಮೇಲೆ ಕಿರಿಯ ನೌಕರರ ವೇತನಕ್ಕೆ ವೇತನ ಸಮಾನತೆ ಅನುಸರಿಸಬೇಕಾದುದರಿಂದ ಕಚೇರಿ ಆದೇಶ ಸಂ.ಕವಿಹಂ:ಆಸಿ:ವೇಸಿ:09–10/694, ದಿನಾಂಕ 27–05–2009ರನ್ವಯ ಸದರಿ ನೌಕರರ</td>
<td>ಪತ್ರಾಂಕಿತ ವ್ಯವಸ್ಥಾಪಕರ ಬಡ್ತಿ ದಿನಾಂಕ, ವೇತನ, ಹಿರಿಯ/ಕಿರಿಯ ನೌಕರರ ವಿವರ ಈ ಕೆಳಗಿನಂತಿದೆ.
<table>
<tr><td>ವಿವರ</td><td>ಶ್ರೀ ಮಹೇಶ್ ಉಣಕಲ್</td><td>ಶ್ರೀ ಎ.ಕಾಶಿವಿಶ್ವನಾಥ್</td><td>ಶ್ರೀ ಡಿ.ವಿ.ಪ್ರಕಾಶ್</td><td>ಶ್ರೀಮತಿ ಅನಿತಾ ಬೊಥೆಲ್ಲೊ</td></tr>
<tr><td>ಅಧೀಕ್ಷಕರಾಗಿ ಬಡ್ತಿ ಹೊಂದಿದ ದಿನಾಂಕ</td><td>01.09.02</td><td>17.09.03</td><td>27.12.08</td><td>27.12.08</td></tr>
<tr><td>12/08ಕ್ಕೆ ಮೂಲ ವೇತನ</td><td>13350/–</td><td>13350/–</td><td>13700/–</td><td>13700/–</td></tr>
<tr><td>12/08ಕ್ಕೆ</td><td>13700/–</td><td>13700/–</td><td>13700/–</td><td>13700/–</td></tr>
</table>
</td>
<td></td>
<td></td>
</tr>
</table>



PDF created with pdfFactory trial version www.pdffactory.com

ವೇತನವನ್ನು 01–12–2008ಕ್ಕೆ ರೂ.13700–00ಗಳೆಂದು ನಿಗದಿಗೊಳಿಸಿ ದಿನಾಂಕ 01–04–2009ಕ್ಕೆ ರೂ.14050–00ಗಳನ್ನು ನಿಗದಿಗೊಳಿಸಿ ವೇತನ ನಿಗದಿಪಡಿಸಿರುತ್ತಾರೆ. ಹಿರಿಯ ನೌಕರರ ವೇತನವನ್ನು ಕಿರಿಯ ನೌಕರರ ವೇತನಕ್ಕೆ ಸಮಾನವಾಗಿ ನಿಗದಿಗೊಳಿಸುವಲ್ಲಿ ಕಿರಿಯ ನೌಕರರಿಂದ ಸೇವಾ ವಿವರಗಳ ಸಂಪೂರ್ಣ ಮಾಹಿತಿಯನ್ನು ತಪಾಸಣೆ ಸಮಯದಲ್ಲಿ ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಸದರಿ ನೌಕರರ ವೇತನ ವ್ಯತ್ಯಾಸದ ಮೊಬಲಗು ಲೆಕ್ಕ ಹಾಕಲಾಗಿ ರೂ.20816–00ಗಳಾಗಿರುತ್ತದೆ. ಕಾರಣ ಸದರಿ ನೌಕರರಿಗೆ ತಲಾ ರೂ.10423–00 ಗಳ ವೇತನ ವ್ಯತ್ಯಾಸದ ಮೊಬಲಗು ಪಾವತಿಸಿರುವುದನ್ನು ಆಕ್ಷೇಪಣೆಯಲ್ಲಿಡಸಲಾಗಿರುತ್ತದೆ.

| | | | |
|---|---|---|---|
| 01–12–2008 | 13350 | 13700 | |
| 26.75 | 3571 | 3665 | |
| | 1001 | 1025 | |
| | **17822** | **18393** | **471** |
| 01–01–09ರಿಂದ 31–03–2009 | 13350 | 13700 | 489x3 |
| 32.75 | 4375 | 4487 | |
| | 1001 | 1025 | |
| | **18726** | **19215** | 1467 |
| 01–04–2009 ರಿಂದ 30–06–2009 | 13350 | 14050 | 964x3 |
| 32.75 | 4372 | 4601 | |
| | 668 | 703 | |
| | **18390** | **19354** | **2892** |
| 01–07–2009 ರಿಂದ 31–08–2009 | 13350 | 14050 | 1001x2 |
| 38% | 5073 | 5339 | |
| | 668 | 703 | |
| | **19091** | **20092** | |
| 01–01–2010ರಿಂದ 31–03–2010 | 13700 | 14050 | 529x3 |

| | | | | |
|---|---|---|---|---|
| ಪರಿಷ್ಕೃತ ಮೂಲ ವೇತನ | | | | |
| 04/09ಕ್ಕೆ ಮೂಲ ವೇತನ | 14050/– | 14050/ | 14050/ | 14050/ |
| 07/09ಕ್ಕೆ ಮೂಲ ವೇತನ | 14050/ | 14050/ | 14050/ | 14050/ |
| 09/09ಕ್ಕೆ ಮೂಲ ವೇತನ | 14050/ | 14050/ | 14050/ | 14050/ |

ಸರ್ಕಾರದ ಆದೇಶ ಸಂಖ್ಯೆ:ಎಫ್.ಡಿ 17 ಎಸ್.ಆರ್.ಪಿ.2007, ಬೆಂಗಳೂರು ದಿನಾಂಕ:16.05.2007ರ ನಿಯಮ 7 ಉಪನಿಯಮ 8ರಲ್ಲಿ ಉಲ್ಲೇಖಿಸಿದಂತೆ ಶ್ರೀ ಮಹೇಶ್ ಉಣಕಲ್ ಮತ್ತು ಶ್ರೀ ಎ.ಕಾಶಿವಿಶ್ವನಾಥ್ ಪತ್ರಾಂಕಿತ ವ್ಯವಸ್ಥಾಪಕರು ಇವರ ವೇತನವನ್ನು ಪುನರ್‌ನಿಗದಿಪಡಿಸಿದೆ.

ಶ್ರೀ ಮಹೇಶ್ ಉಣಕಲ್ ಮತ್ತು ಶ್ರೀ ಎ.ಕಾಶಿವಿಶ್ವನಾಥ್ 2005ರ ಜುಲೈ1ಕ್ಕೆ ಮುಂಚಿತವಾಗಿ (ದಿನಾಂಕ:01.09.2002 ಮತ್ತು17.09.2003 ಕ್ರಮವಾಗಿ) ಉನ್ನತ ಹುದ್ದೆಯಾದ ಪತ್ರಾಕಿತ ವ್ಯವಸ್ಥಾಪಕರ ಹುದ್ದೆಗೆ ಬಡ್ತಿ ಹೊಂದಿದ "ಹಿರಿಯ ನೌಕರರು" ಪರಿಷ್ಕೃತ ವೇತನ ಶ್ರೇಣಿಯಲ್ಲಿ ದಿನಾಂಕ: 27.02.2008 ರಂದು ಶ್ರೀಮತಿ ಅನಿತಾ ಬೋಧೆಲೋ ಹಾಗೂ ಶ್ರೀ ಡಿ.ವಿ. ಪ್ರಕಾಶ್ ಇವರು ಅಧೀಕ್ಷರ ಹುದ್ದೆಗೆ 2005 ಜುಲೈ 1 ನಂತರ ಉನ್ನತ ಹುದ್ದೆಗೆ ಬಡ್ತಿ ಹೊಂದಿದ ಕಿರಿಯ ನೌಕರರಕ್ಕಿಂತ ಕಡಿಮೆ ವೇತನ ಪಡೆಯುತ್ತಿದ್ದಾರೆ. ಹಿರಿಯ ನೌಕರರ ವೇತನವನ್ನು ಉನ್ನತ ಹುದ್ದೆಯಾದ ಪತ್ರಾಂಕಿತ ವ್ಯವಸ್ಥಾಪಕರ ಹುದ್ದೆಯಲ್ಲಿ ಅವರ ಕಿರಿಯ ನೌಕರರಿಗೆ ನಿಗದಿಗೊಳಿಸುವ ವೇತನಕ್ಕೆ ಸಮಾನಾದ ಮೊತ್ತ ರೂ.13700/–ಕ್ಕೆ ಏರಿಸಿದೆ. ಈ ರೀತಿ ವೇತನ ಏರಿಕೆಯನ್ನು ಕಿರಿಯ ನೌಕರರು ಬಡ್ತಿ ಹೊಂದಿದ ದಿನಾಂಕದಿಂದ ಜಾರಿಗೆ ಬರುವಂತೆ ಮಾಡಿದೆ.

ಅ) ಅವರ ಬಡ್ತಿಗೆ ಮುನ್ನ ಹಿರಿಯ ಮತ್ತು ಕಿರಿಯ ನೌಕರರು ಧಾರಣ ಮಾಡಿದ ಹುದ್ದೆಗಳು ಒಂದೇ ಪದವೃಂದವಾದ " ಹಿರಿಯ ಸಹಾಯಕ"ಕ್ಕೆ ಸೇರಿವೆ ಮತ್ತು ಅವರು ಬಡ್ತಿ ಹೊಂದಿದ ಹುದ್ದೆಗಳ "ಪತ್ರಾಂಕಿತ ವ್ಯವಸ್ಥಾಪಕ" ಒಂದೇ ಪದ ವೃಂದಕ್ಕೆ ಸೇರಿದ



PDF created with pdfFactory trial version www.pdffactory.com

| | | | |
|---|---|---|---|
| 46 | 6302 | 6463 | |
| | 685 | 703 | |
| | **20687** | **2121** | |
| **ಒಟ್ಟು** | | | **10423** |

ಹುದ್ದೆಗಳಾಗಿವೆ.

ಆ) ಅವರು ವೇತನ ಪಡೆಯಲು ಅರ್ಹರಾಗಿರುವಂಥ ಕೆಳಗಿನ ಹುದ್ದೆಯ ಪ್ರಸಕ್ತ ವೇತನ ಶ್ರೇಣಿ 5200–9580 ಮತ್ತು ಉನ್ನತ ಹುದ್ದೆ (ಪತ್ರಾಂಕಿತ ವ್ಯವಸ್ಥಾಪಕ) ಪ್ರಸಕ್ತ ವೇತನ ಶ್ರೇಣಿ 6000–11200 ಮತ್ತು ಪರಿಷ್ಕೃತ ವೇತನ ಶ್ರೇಣಿ 11400–21600 ಸರಿಸಮಾನವಾಗಿವೆ.

ಇ) ಕಿರಿಯ ನೌಕರರು ಕೆಳಗಿನ ಹುದ್ದೆಯ ಪ್ರಸಕ್ತ ವೇತನ ಶ್ರೇಣಿಯಲ್ಲಿ ಹಿರಿಯ ನೌಕರರಿಗಿಂತ ಹೆಚ್ಚು ವೇತನ ಪಡೆದಿರುವುದಿಲ್ಲ.

ಈ) ಪರಿಷ್ಕೃತ ವೇತನ ಶ್ರೇಣಿಯಲ್ಲಿ ಅಂಥ ಬಡ್ತಿಯಿಂದಾಗಿ ವೇತನ ನಿಗದಿಯನ್ನು ಕ್ರಮಬದ್ಧಗೊಳಿಸುವ ಈ ಸರ್ಕಾರಿ ಆದೇಶ ಸಂಖ್ಯೆ ಎಫ್ 17 ಎಸ್‌ಆರ್‌ಪಿ 2007, ಬೆಂಗಳೂರು ದಿನಾಂಕ:16.05.2007ರ ಪ್ರಕಾರ ತಾರತಮ್ಯ ಉಂಟಾಗಿರುತ್ತದೆ. ಅದನ್ನು ಕಿರಿಯ ನೌಕರರ ವೇತನ ಹಂತಕ್ಕೆ ಹಿರಿಯ ನೌಕರರ ವೇತನವನ್ನು ಏರಿಸಲಾಗಿದೆ.

ಮೇಲಿನಂತೆ ಕಿರಿಯ, ಹಿರಿಯ ನೌಕರರು ಯಾರ್‍ಯಾರು ಮತ್ತು ಅವರ ಸಂಬಳದ ವ್ಯತ್ಯಾಸದ ಬಗ್ಗೆ ಸ್ಪಷ್ಟವಾಗಿ ಮಾಹಿತಿ ನೀಡಲಾಗಿದೆ, ಯಾವುದೇ ಲೋಪವಾಗಿರುವುದಿಲ್ಲ ಆದುದರಿಂದ ಈ ಕಂಡಿಕೆಯನ್ನು ಕೈ ಬಿಡಲು ಕೋರಲಾಗಿದೆ.

29 **ಶ್ರೀಮತಿ ಡಿ.ಪ್ರಭಾ, ಈ.ಟಿ.ನಾಗರಾಜ, ಶ್ರೀನಿವಾಸ ಹೆಚ್., ಪತ್ರಾಂಕಿತ ವ್ಯವಸ್ಥಾಪಕರು ಇವರ ವೇತನ ಪುನರ್ ನಿಗದಿಪಡಿಸಿದ ಬಗ್ಗೆ**

ಶ್ರೀಮತಿ ಡಿ.ಪ್ರಭಾ, ಈ.ಟಿ.ನಾಗರಾಜು, ಶ್ರೀನಿವಾಶ ಹೆಚ್., ಪತ್ರಾಂಕಿತ ವ್ಯವಸ್ಥಾಪಕರು ಇವರ ಸೇವಾ ಪುಸ್ತಕಗಳನ್ನು ಪರಿಶೀಲಿಸಿಲಾಗಿ ಕಚೇರಿ ಆದೇಶ ಸಂಖ್ಯೆ:ಕವಿಹಂ:ಕುಸ:ಮುಂಬಡ್ತಿ:03–04–1986, ದಿನಾಂಕ 22–12–2003ರಲ್ಲಿ ಹಿರಿಯ ಸಹಾಯಕ ಹುದ್ದೆಯಿಂದ ಪತ್ರಾಂಕಿತ ಹುದ್ದೆಗೆ ಮುಂಬಡ್ತಿ ಹೊಂದಿರುತ್ತಾರೆ. ವಿಶ್ವವಿದ್ಯಾಲಯದ ಕೆಲವು ಸಿಬ್ಬಂದಿಗಳಾದ ಡಿ.ವಿ.ಪ್ರಕಾಶ್, ಅನಿತಾ ಬೊತೆಲ್ಲೋ ಇವರಿಗೆ 2008ರಲ್ಲಿ ಹಿರಿಯ ಸಹಾಯಕ ಹುದ್ದೆಯಿಂದ ಪತ್ರಾಂಕಿತ ವ್ಯವಸ್ಥಾಪಕ ಹುದ್ದೆಗೆ ಬಡ್ತಿ ಹೊಂದಿದ ಇವರು ಹಿರಿಯ ನೌಕರರಿಗಿಂತ ಹೆಚ್ಚಿನ ವೇತನ ಪಡೆಯುತ್ತಿದ್ದಾರೆಂಬ ಹಿನ್ನೆಲೆಯಲ್ಲಿ ಕಿರಿಯ ನೌಕರರ ವೇತನ ಹಂತಕ್ಕೆ ಕಿರಿಯ ನೌಕರರ ವೇತನವನ್ನು ನಿಗದಿಗೊಳಿಸಲು ಕಚೇರಿ ಆದೇಶ ಸಂಖ್ಯೆ ಕವಿಹಂ:ಉಕುಸ:ಆಸಿ:ವೇನಿ:09–10/492, ದಿನಾಂಕ 25–05–2009ರಲ್ಲಿ ಮೇಲಿನ ನೌಕರರಿಗೆ ಕೆಳಿನಂತೆ

ಪತ್ರಾಂಕಿತ ವ್ಯವಸ್ಥಾಪಕರ ಬಡ್ತಿ ದಿನಾಂಕ, ವೇತನ ಹಿರಿಯ/ಕಿರಿಯ ನೌಕರರ ವಿವರ ಈ ಕೆಳಗಿನಂತಿದೆ.

| ವಿವರ | ಶ್ರೀಮತಿ ಡಿ.ಪ್ರಭಾ | ಶ್ರೀ ಎಚ್. ಶ್ರೀನಿವಾಸ | ಶ್ರೀ ಈಟಿ. ನಾಗರಾಜ | ಶ್ರೀ ಡಿ.ವಿ.ಪ್ರಕಾಶ | ಶ್ರೀಮತಿ ಅನಿತಾ ಬೊಥೆಲೆ ಲ್ಲೊ |
|---|---|---|---|---|---|
| ಅಧಿಕ್ಷಕರಾಗಿ ಬಡ್ತಿ ಹೊಂದಿದ ದಿನಾಂಕ | 13.07.03 | 17.09.03 | 18.09.03 | 27.12.08 | 27.12.08 |
| 12/08ಕ್ಕೆ ಮೂಲ ವೇತನ | 13350/– | 13350/– | 13350/– | 13700/– | 13700/– |
| 12/08ಕ್ಕೆ ಪರಿಷ್ಕೃತ ಮೂಲ ವೇತನ | 13700/– | 13700/– | 13700/– | 13700/– | 13700/– |



PDF created with pdfFactory trial version www.pdffactory.com

ವೇತನ ನಿಗದಿಗೊಳಿಸಿ ವೇತನ ವ್ಯತ್ಯಾಸದ ಮೊಬಲಗು ಪಡೆಯಲು ಅರ್ಹರಾಗಿರುತ್ತಾರೆಂದುತಿಳಿಸಲಾಗಿದೆ.

ಆದರೆ ಸದರಿ ನೌಕರರಲ್ಲಿ ಕಿರಿಯ ಹಿರಿಯ ನೌಕರರು ಯಾರು ಮತ್ತು ಕಿರಿಯ ನೌಕರರಿಗೆ ವೇತನ ವ್ಯತ್ಯಾಸ ಯಾವ ಸಂದರ್ಭದಲ್ಲಿ ಆಗಿದೆ ಎಂಬ ಬಗ್ಗೆ ಸ್ಪಷ್ಟ ಮಾಹಿತಿ ಇರುವುದಿಲ್ಲ. ಆದುದರಿಂದ ಸದರಿ ನೌಕರರ ವೇತನ ನಿಗದಿಪಡಿಸಿದ ಕ್ರಮವನ್ನು ಆಕ್ಷೇಪಿಸಲಾಗಿರುತ್ತದೆ.

**ನಿಗದಿಪಡಿಸಿದ ವೇತನ** **ನಿಗದಿಪಡಿಸಬೇಕಾದ ವೇತನ**

**ಡಿ.ಪ್ರಭಾ**

01-07-08 13000/11400-21600 01-07-8 13000/11400-21600

01-12-08 13700 01-07-09,13350

01-09-09 14050

**ಈ.ಟಿ.ನಾಗರಾಜ**

01-09-08 13000/11400-2160001-09-08 13000/11400-21600

01-12-08 13700

01-09-09 14050 01-09-09 13350

**ಶ್ರೀನಿವಾಸ ಎಚ್.**

01-09-08 13000/11400-21600 01-09-08 13000

01-12-08 13700

01-09-09 14050 01-09-09 13350

ಈ ಮೇಲಿನ ನೌಕರರ ವೇತನ ವ್ಯತ್ಯಾಸದ ಮೊಬಲಗು ಲೆಕ್ಕ ಹಾಕಲಾಗಿ ರೂ.54362-00ಗಳಾಗಿರುತ್ತದೆ. ಆದುದರಿಂದ ಸದರಿ ಮೊಬಲಗು ಆಕ್ಷೇಪಣೆಯಲ್ಲಿಡಲಾಗಿರುತ್ತದೆ.

**ಡಿ.ಪ್ರಭಾ**

01-12-08ರಿಂದ 31-11-08 13000 13700

26.75 3474 3665

975 1028

**17449** **18393** 944

01-09-09ರಿಂದ 31-03-09 13000 13700 982x3

30.75 4258 4487

975 1028

| | | | | | |
|---|---|---|---|---|---|
| 04/09ಕ್ಕೆ ಮೂಲ ವೇತನ | 14050/– | 14050/ | 14050/ | 14050/ | 14050/ |
| 07/09ಕ್ಕೆ ಮೂಲ ವೇತನ | 14050/ | 14050/ | 14050/ | 14050/ | 14050/ |
| 09/09ಕ್ಕೆ ಮೂಲ ವೇತನ | 14050/ | 14050/ | 14050/ | 14050/ | 14050/ |

ಸರ್ಕಾರಿ ಆದೇಶ ಸಂಖ್ಯೆ:ಎಫ್.ಡಿ 17 ಎಸ್.ಆರ್.ಪಿ 2007 ಬೆಂಗಳೂರು ದಿನಾಂಕ:16.05.2007ರ ನಿಯಮ 7 ಉಪನಿಯಮ 8ರಲ್ಲಿ ಉಲ್ಲೇಖಿಸಿದಂತೆ ಶ್ರೀಮತಿ ಡಿ.ಪ್ರಭಾ, ಶ್ರೀ ಈಟಿ.ನಾಗರಾಜ, ಶ್ರೀ ಎಚ್. ಶ್ರೀನಿವಾಸ್ ಪತ್ರಾಂಕಿತ ವ್ಯವಸ್ಥಾಪಕರು ಇವರ ವೇತನವನ್ನು ಪುನರ್ ನಿಗದಿಪಡಿಸಿದೆ.

ಶ್ರೀಮತಿ ಡಿ.ಪ್ರಭಾ, ಶ್ರೀಎಚ್.ಶ್ರೀನಿವಾಸ್ ಮತ್ತು ಶ್ರೀ ಈಟಿ.ನಾಗರಾಜ 2005ರ ಜುಲೈ 1ಕ್ಕೆ ಮುಂಚಿತವಾಗಿ ದಿನಾಂಕ:13.07.03, 17.09.03, 18.09.03 ಕ್ರಮವಾಗಿ ಉನ್ನತ ಹುದ್ದೆಯಾದ ಪತ್ರಾಂಕಿತ ವ್ಯವಸ್ಥಾಪಕ ಹುದ್ದೆಗೆ ಬಡ್ತಿ ಹೊಂದಿದ "ಹಿರಿಯ ನೌಕರರು" ಪರಿಷ್ಕೃತ ವೇತನ ಶ್ರೇಣಿಯಲ್ಲಿ ದಿನಾಂಕ:27.12.2008ರಂದು ಶ್ರೀಮತಿ ಅನಿತಾ ಬೊಥೆಲ್ಲೊ ಹಾಗೂ ಶ್ರೀ ಡಿ.ವಿ.ಪ್ರಕಾಶ್ ಇವರು ಅಧೀಕ್ಷಕ ಹುದ್ದೆಗೆ 2005, ಜುಲೈ 1ರ ನಂತರ ಉನ್ನತ ಹುದ್ದೆಗೆ ಬಡ್ತಿ ಹೊಂದಿದ ಕಿರಿಯ ನೌಕರಕ್ಕಿಂತ ಕಡಿಮೆ ವೇತನ ಪಡೆಯುತ್ತಿದ್ದಾರೆ. ಹಿರಿಯ ನೌಕರರ ವೇತನವನ್ನು ಉನ್ನತ ಹುದ್ದೆಯಾದ ಪತ್ರಾಂಕಿತ ವ್ಯವಸ್ಥಾಪಕರ ಹುದ್ದೆಯಲ್ಲಿ ಅವರ ಕಿರಿಯ ನೌಕರರಿಗೆ ನಿಗದಿಗೊಳಿಸುವ ವೇತನಕ್ಕೆ ಸಮವಾದ ಮೊತ್ತ ರೂ.13700/-ಕ್ಕೆ ಏರಿಸಿದೆ. ಈ ರೀತಿ ವೇತನ ಏರಿಕೆಯನ್ನು ಕಿರಿಯ ನೌಕರರು ಬಡ್ತಿ ಹೊಂದಿದ ದಿನಾಂಕದಿಂದ ಬಾಡಿಗೆ ಬರುವಂತೆ ಮಾಡಿದೆ.

ಅ)ಅವರ ಬಡ್ತಿಗೆ ಮುನ್ನ ಹಿರಿಯ ಮತ್ತು ಕಿರಿಯ ನೌಕರರು ಧಾರಣ ಮಾಡಿದ ಹುದ್ದೆಗಳು ಒಂದೇ ಪದ ವೃಂದವಾದ "ಹಿರಿಯ ಸಹಾಯಕ" ಕ್ಕೆ ಸೇರಿವೆ ಮತ್ತು ಅವರು ಬಡ್ತಿ ಹೊಂದಿದ ಹುದ್ದೆಗಳು "ಪತ್ರಾಂಕಿತ ವ್ಯವಸ್ಥಾಪಕ" ಒಂದೇ ಪದ ವೃಂದಕ್ಕೆ ಸೇರಿದ ಹುದ್ದೆಗಳಾಗಿವೆ.

ಆ)ಅವರು ವೇತನ ಪಡೆಯಲು ಅರ್ಹರಾಗಿರುವಂಥ ಕೆಳಗಿನ ಹುದ್ದೆಯ ಪ್ರಸಕ್ತ ವೇತನ



PDF created with pdfFactory trial version www.pdffactory.com

<table>
<tr><td></td><td>18233 19215 2946<br>01–04–09ರಿಂದ 30–06–09 13000 14050 1456x3<br>4258 4601<br>780 843<br>18038 19494 4368<br>01–07–09 ರಿಂದ 31–08–09 13350 14050 1008x6<br>5073 5339<br>801 843<br>19224 20232 6048<br>01–01–10ರಿಂದ 31–03–10 13350 14050 1044x3<br>6141 6443<br>801 843<br>20292 21336 3132<br>ಒಟ್ಟು 17438<br>ಈ.ಟಿ.ನಾಗರಾಜ ಮತ್ತು ಶ್ರೀನಿವಾಸ್ ಎಚ್.<br>01–12–2008ರಿಂದ 31–12–2008 944<br>01–01–2009ರಿಂದ 31–03–2009 2946<br>01–04–2009ರಿಂದ 30–06–2009 4368<br>01–07–2009ರಿಂದ 31–08–2009 13000 14050 1520x2<br>4940 5339<br>780 843<br>18720 20232 3040<br>01–01–2009ರಿಂದ 31–12–2009 1008x4 4032<br>01–01–2010ರಿಂದ 31–03–2010 3132<br>ಒಟ್ಟು 18462</td><td>ಶ್ರೇಣಿ 5200–9580 ಮತ್ತು ಉನ್ನತ ಹುದ್ದೆ (ಪತ್ರಾಂಕಿತ ವ್ಯವಸ್ಥಾಪಕ) ಪ್ರಸಕ್ತ ವೇತನ ಶ್ರೇಣಿ 6000–11200 ಮತ್ತು ಪರಿಷ್ಕೃತ ವೇತನ ಶ್ರೇಣಿ 11400–21600 ಸರಿಸಮಾನವಾಗಿದೆ.<br>ಇ)ಕಿರಿಯ ನೌಕರರು ಕೆಳಗಿನ ಹುದ್ದೆಯ ಪ್ರಸಕ್ತ ವೇತನ ಶ್ರೇಣಿಯಲ್ಲಿ ಹಿರಿಯ ನೌಕರರಿಗಿಂತ ಹೆಚ್ಚು ವೇತನ ಪಡೆದಿರುವುದಿಲ್ಲ.<br>ಈ) ಪರಿಷ್ಕೃತ ವೇತನ ಶ್ರೇಣಿಯಲ್ಲಿ ಅಂಥ ಬಡ್ತಿಯಿಂದಾಗಿ ವೇತನ ನಿಗದಿಯನ್ನು ಕ್ರಮಬದ್ಧಗೊಳಿಸುವ ಈ ಸರ್ಕಾರಿ ಆದೇಶ ಸಂಖ್ಯೆ:ಎಫ್‌ಡಿ17 ಎಸ್.ಆರ್.ಪಿ 2007 ಬೆಂಗಳೂರು ದಿನಾಂಕ:16.05.2007ರ ಪ್ರಕಾರ ತಾರತಮ್ಯ ಉಂಟಾಗಿರುತ್ತದೆ. ಅದನ್ನು ಕಿರಿಯ ನೌಕರರ ವೇತನದ ಹಂತಕ್ಕೆ ಹಿರಿಯ ನೌಕರರ ವೇತನವನ್ನು ಏರಿಸಲಾಗಿದೆ.<br>ಮೇಲಿನಂತೆ ಕಿರಿಯ/ಹಿರಿಯ ನೌಕರರು ಯಾರ್‍ಯಾರು ಮತ್ತು ಅವರ ಸಂಬಳದ ವ್ಯತ್ಯಾಸದ ಬಗ್ಗೆ ಸ್ಪಷ್ಟವಾಗಿ ಮಾಹಿತಿ ನೀಡಲಾಗಿದೆ. ಯಾವುದೇ ಲೋಪವಾಗಿರುವುದಿಲ್ಲ. ಆದುದರಿಂದ ಈ ಪ್ಯಾರವನ್ನು ಕೈ ಬಿಡಲು ಕೋರಲಾಗಿದೆ.</td><td></td><td></td></tr>
<tr><td>30</td><td>ಹಿರಿಯ ಸಹಾಯಕರಿಗೆ 1999ರ ಪರಿಷ್ಕೃತ ವೇತನ ಶ್ರೇಣಿಯಲ್ಲಿ ವೇತನ ಪುನರ್ ನಿಗದಿಪಡಿಸಿರುವ</td><td></td><td></td><td></td></tr>
</table>



PDF created with pdfFactory trial version www.pdffactory.com

| | | | | |
|---|---|---|---|---|
| | **ಬಗ್ಗೆ**<br>2007–08ನೇ ಹಾಗೂ 2008–09ನೇ ಸಾಲಿನ ಲೆಕ್ಕ ತಪಾಸಣೆ ವರದಿಯ ಕಂಡಿಕೆ ಸಂ.44ರಲ್ಲಿ ಎ.ವೆಂಕಟೇಶ್, ಸಹಾಯಕ ಕುಲಸಚಿವರ ಮತ್ತು ಪತ್ರಾಂಕಿತ ವ್ಯವಸ್ಥಾಪಕರುಗಳಾದ ಎ.ಕಾಶಿವಿಶ್ವನಾಥ, ಬಿ.ಗುರುಬಸಪ್ಪ, ಮಹೇಶ ಉಣಕಲ್ಲು, ಇವರುಗಳು ಹಿರಿಯ ನೌಕರರಾಗಿದ್ದು, ಕಿರಿಯ ನೌಕರರಿಗಿಂತ ಮೂಲ ವೇತನ ಕಡಿಮೆ ಪಡೆಯುತ್ತಿದ್ದುದರಿಂದ ವೇತನ ಸಮಾನತೆ ಅನುಸರಿಸುವ ಸಂಬಂಧ ದಿನಾಂಕ 01–04–1998ರಿಂದ ವೇತನ ಪುನರ್ ನಿಗದಿಪಡಿಸಿರುವುದಕ್ಕೆ ಯಾವುದೇ ಸ್ಪಷ್ಟ ಆದೇಶಗಳನ್ನು ಉಲ್ಲೇಖಿಸಿರುವುದಿಲ್ಲ ಹಾಗೂ ಸಂಪೂರ್ಣ ಮಾಹಿತಿ ಹಾಜರುಪಡಿಸಿಲ್ಲವೆಂದು ತಿಳಿಸಿ ಹೆಚ್ಚುವರಿಯಾಗಿ ಪಾವತಿಸಿದ ವೇತನ ವ್ಯತ್ಯಾಸದ ಮೊಬಲಗುರೂ.113126–00ಗಳನ್ನು ಆಕ್ಷೇಪಣೆಯಲ್ಲಿಡಲಾಗಿರುತ್ತದೆ. ಆದರೆ ಈ ಆಕ್ಷೇಪಣೆಗೆ ಸೂಕ್ತ ಕ್ರಮ ಕೈಗೊಳ್ಳದ ಪ್ರಯುಕ್ತ ಸದರಿ ಕಂಡಿಕೆಯನ್ನು ಮುಂದುವರೆಸಿದೆ. | ಸರ್ಕಾರಿ ಆದೇಶ ಸಂಖ್ಯೆ: ಎಫ್.ಡಿ/17/ಎಸ್.ಆರ್.ಪಿ/2007, ಬೆಂಗಳೂರು ದಿನಾಂಕ:16.05.2007ರ ನಿಯಮ 7 ಉಪನಿಯಮ 8ರಲ್ಲಿ ಉಲ್ಲೇಖಿಸಿದಂತೆ ಕಿರಿಯ ನೌಕರರ ವೇತನ ಹಂತಕ್ಕೆ ಹಿರಿಯ ನೌಕರರ ವೇತನ ಪುನರ್ ನಿಗದಿಗೊಳಿಸಿ ಪರಿಷ್ಕೃತಗೊಳಿಸಲಾಗಿದೆ.<br>ಸದರಿ ಕಂಡಿಕೆ 2007–08 ಮತ್ತು 2008–09ನೇ ಸಾಲಿನ ಲೆಕ್ಕ ತನಿಖಾ ವರದಿಯಲ್ಲಿ ಕಂಡಿಕೆ (44)ರಲ್ಲಿ ಈಗಾಗಲೇ ಪ್ರಸ್ತಾಪ ಮಾಡಲಾಗಿದೆ. ಹಾಗೂ ರೂ.113126/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ಪುನಃ ಸದರಿ ಕಂಡಿಕೆಯನ್ನು 2009–10ನೇ ಸಾಲಿನಲ್ಲಿ ಪ್ರಸ್ತಾಪಿಸಿ ಆಕ್ಷೇಪಣೆ ಮೊತ್ತವನ್ನು ಹೆಚ್ಚಿಸಲಾಗಿದೆ. ಇದರಿಂದಾಗಿ ಎರಡು ಸಲ ಆಕ್ಷೇಪಣೆ ಮೊತ್ತ ಹೆಚ್ಚಿಸಿದಂತಾಗುತ್ತದೆ. ಕಾರಣ ಆಕ್ಷೇಪಣೆಗೆ ಸೂಚಿಸಿದ ಮೊತ್ತ ಕಡಿಮೆ ಮಾಡಲು ಕೋರಿದೆ. ಹಾಗೂ ಸದರಿ ಕಂಡಿಕೆಯನ್ನು ಈ ವರದಿಯಲ್ಲಿ ಕೈ ಬಿಡಲು ಕೋರಿದೆ. | | |
| 31 | **ಶ್ರೀ ರಾಮಮೂರ್ತಿ, ಮುಖ್ಯಗ್ರಂಥಪಾಲಕರು ಇವರ ನಿವೃತ್ತಿ ವೇತನ ಸೌಲಭ್ಯ ಮಂಜೂರು ಮಾಡಿದ ಬಗ್ಗೆ**<br>ಶ್ರೀ ರಾಮಮೂರ್ತಿ, ನಿವೃತ್ತ ಮುಖ್ಯಗ್ರಂಥಪಾಲಕರು ಇವರ ನಿವೃತ್ತಿ ವೇತನ ಸೌಲಭ್ಯಗಳನ್ನು ಪ್ರಾಧಿಕರಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ ನಿವೃತ್ತದಾರರು ದಿನಾಂಕ 18–11–1968ರಿಂದ 18–08–1982ರ ವರೆಗೆ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸಹಾಯಕ ಗ್ರಂಥಪಾಲಕರಾಗಿ ಸೇವೆ ಸಲ್ಲಿಸಿ ರಾಜಿನಾಮೆ ನೀಡಿರುತ್ತಾರೆ. ನಂತರ ದಿನಾಂಕ 19–08–1982ರಿಂದ 02–09–1992ರ ವರೆಗೆ ಖಾಸಗಿ ಸಂಸ್ಥೆಯಾದ ಪ್ರಿಂಟರ್ಸ್(ಮೈಸೂರು) ಲಿಮಿಟೆಡ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸಿ ರಾಜಿನಾಮೆ ನೀಡಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಮುಖ್ಯಗ್ರಂಥಪಾಲಕರೆಂದು ದಿನಾಂಕ 03–09–1992ರಂದು ನೇಮಗೊಂಡು ದಿನಾಂಕ 31–12–2011ರಂದು ವಯೋ | ಶ್ರೀ ಜೆ.ಆರ್. ರಾಮಮೂರ್ತಿ ಮುಖ್ಯಗ್ರಂಥಪಾಲಕರು ಇವರ ನಿವೃತ್ತಿ ವೇತನ ಸೌಲಭ್ಯ ಮಂಜೂರು ಮಾಡಿದ ಬಗ್ಗೆ:<br>ಶ್ರೀ ಜೆ.ಆರ್. ರಾಮಮೂರ್ತಿ ಮುಖ್ಯಗ್ರಂಥಪಾಲಕರು ಇವರು ದಿನಾಂಕ:18.11.1968 ರಿಂದ 18.08.1982ರವರೆಗೆ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸಹಾಯಕ ಗ್ರಂಥಪಾಲಕರಾಗಿ ಸೇವೆ ಸಲ್ಲಿಸಿ ಕೆ.ಸಿ.ಎಸ್.ಆರ್. ನಿಯಮ 252 (ಬಿ) ಪ್ರಕಾರ ಸೂಕ್ತ ಅನುಮತಿ ಪಡೆದು ಬೆರೊಂದು ನೇಮಕಾತಿಯಾಗಿದ್ದಾರೆ. ಹೀಗೆ ನೀಡಿದ ನೇಮಕದ ರಾಜಿನಾಮೆಯು ಬೆಂಗಳೂರು ವಿಶ್ವವಿದ್ಯಾಲಯ ಸೇವೆಗೆ ನೀಡಿದ ರಾಜಿನಾಮೆ ಆಗುವುದಿಲ್ಲ. ಕನ್ನಡ ವಿಶ್ವವಿದ್ಯಾಲಯದಲ್ಲಿ ದಿನಾಂಕ:03.09.1992 ರಿಂದ 31.12.2001ರವರೆಗೆ ಸೇವೆ ಸಲ್ಲಿಸಿದ್ದಾರೆ. ಹೀಗೆ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ 13 ವರ್ಷ 9 ತಿಂಗಳು ಮತ್ತು ಕನ್ನಡ ವಿಶ್ವವಿದ್ಯಾಲಯದಲ್ಲಿ 9 ವರ್ಷ 4 ತಿಂಗಳು, ಬಿಟ್ಟ ಸೇವೆ 23 ವರ್ಷ 1 ತಿಂಗಳು ಅಥವಾ 23 ವರ್ಷ ಅಥವಾ 46 ಅರ್ಧ ವರ್ಷ ಸೇವೆ | | |



PDF created with pdfFactory trial version www.pdffactory.com

| | | | | |
|---|---|---|---|---|
| | ನಿವೃತ್ತಿ ಹೊಂದಿರುತ್ತಾರೆ. ಕೆ.ಸಿ.ಎಸ್.ಆರ್.ನಿಯಮ 222ರ ಪ್ರಕಾರ ನೌಕರನು ಕನಿಷ್ಟ 10 ವರ್ಷಗಳ ಅರ್ಹ ಸೇವೆಯನ್ನು ಪೂರೈಸಿದಲ್ಲಿ ನಿವೃತ್ತಿ ವೇತನ ಸೌಲಭ್ಯ ಪಡೆಯಲು ಅರ್ಹನಾಗಿರುತ್ತಾರೆ. ಹೀಗಿರುವಲ್ಲಿ ನಿವೃತ್ತದಾರರು ದಿನಾಂಕ 03–09–1992ರಿಂದ 31–12–2001ರ ವರೆಗೆ ಕನ್ನಡ ವಿಶ್ವವಿದ್ಯಾಲಯದಲ್ಲಿ ಸಲ್ಲಿಸಿದ ಸೇವೆ 9 ವರ್ಷ 3 ತಿಂಗಳು 9 ದಿನಗಳು(9ವರ್ಷ 6ತಿಂಗಳು) ನಿವೃತ್ತಿ ವೇತನ ಸೌಲಭ್ಯಕ್ಕೆ ಅನರ್ಹರಾಗಿದ್ದರೂ ಸಹ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸಲ್ಲಿಸಿದ 13ವರ್ಷಗಳನ್ನು(ದಿನಾಂಕ 18–11–1968ರಿಂದ 18–08–1982ರ ವರೆಗೆ) ಸೇರಿಸಿ 22 ವರ್ಷಗಳ ಅರ್ಹಸೇವೆಯೆಂದು ಪರಿಗಣಿಸಿ ನಿವೃತ್ತದಾರರ ಪಿಂಚಣಿ ಸೌಲಭ್ಯಗಳನ್ನು ಪ್ರಾಧಿಕರಿಸಲಾಗಿರುತ್ತದೆ.<br>ಕನ್ನಡ ವಿಶ್ವವಿದ್ಯಾಲಯ ಪರಿನಿಯಮದ ಉಪದಾನ ಪರಿನಿಯಮ 3.2ರ ನಿಯಮ ಪ್ರಕಾರ ಅರ್ಹತಾದಾಯಕ ಸೇವೆ ಅಂದರೆ ಖಾಯಂ ಅಥವಾ ವಿಶ್ವವಿದ್ಯಾಲಯದ ನೇಮಕಾತಿ ನಿಯಮದ ಪ್ರಕಾರ ಕ್ರಮಬದ್ಧ ಅಥವಾ ಪೂರ್ಣಾವಧಿ ನಿವೃತ್ತಿವೇತನ ನಿಯಮ ಹುದ್ದೆಯಲ್ಲಿಯ ಸೇವೆ ಕಾರಣ ನಿವೃತ್ತದಾರರು ದಿನಾಂಕ 19–08–1982ರಿಂದ 02–091992ರ ವರೆಗಿನ ಖಾಸಗಿ ಸಂಸ್ಥೆಯಲ್ಲಿ ಸಲ್ಲಿಸಿದ ಸೇವೆಯನ್ನು ನಿರಂತರ ಸೇವೆ ಎಂದು ಪರಿಗಣಿಸಲು ಅಥವಾ ಪೂರ್ಣವಧಿ ಸೇವೆಯ ಎಂಬ ಕನ್ನಡ ವಿಶ್ವವಿದ್ಯಾಲಯದ ಪರಿನಿಯಮದಡಿಯಲ್ಲಿ ಕೆ.ಸಿ.ಎಸ್.ಆರ್ ಭಾಗ 4ಕ್ಕೆ ಸಂಬಂಧಪಟ್ಟ ನಿಯಮ 234–ವ, 241–ವ, 242, 243ಗಳ ಉಪಬಂಧಗಳನ್ನು ಹೊರತುಪಡಿಸಿ ಸಂಬಂಧಪಟ್ಟ ವಿವಿಧ ರೀತಿಯ ವಿಶ್ರಾಂತಿ ವೇತನಗಳ, ವಿಶ್ರಾಂತಿ ವೇತನದ ಪರಿವರ್ತನೆ ಸೇರಿ ಇತರೆ ಸಂಬಂಧ ವಿಷಯಗಳು ಸರ್ಕಾರದಲ್ಲಿ ಕಾಲಕಾಲಕ್ಕೆ ತಿದ್ದುಪಡಿಯಾದಂತೆ ಕನ್ನಡ ವಿಶ್ವವಿದ್ಯಾಲಯಕ್ಕೆ ಅನ್ವಯವಾಗುವುದರಿಂದ ಕನ್ನಡ ವಿಶ್ವವಿದ್ಯಾಲಯದ ನೌಕರರಿಗೆ ಕೆ.ಸಿ.ಎಸ್.ಆರ್.ನಿಯಮಗಳು ಅನ್ವಯವಾಗುತ್ತವೆ.<br>ಕಾರಣ ಕೆ.ಸಿ.ಎಸ್.ಆರ್.ನಿಯಮ 222 ಹಾಗೂ ಕನ್ನಡ ವಿಶ್ವವಿದ್ಯಾಲಯ ಪರಿನಿಯಮ ಉಪದಾನ ಪರಿನಿಯಮ 3.2ರ ಪ್ರಕಾರ ಕನಿಷ್ಟ 10 ವರ್ಷಗಳ ಅರ್ಹ ಸೇವೆಯನ್ನು ನಿವೃತ್ತದಾರರು ಪೂರೈಸಬೇಕಾಗಿರುತ್ತದೆ. ಆದುದರಿಂದ ಶ್ರೀ ಜಿ.ರಾಮಮೂರ್ತಿ, | ಆಗಿದೆ.<br>ಸರ್ಕಾರದ ಪತ್ರ ಸಂಖ್ಯೆ ಇಡಿ 9 ಕೆವಿವಿ 2003 ಬೆಂಗಳೂರು ದಿನಾಂಕ:24.07.2003 (ಪತ್ರ ಲಗತ್ತಿಸಿದೆ) (ದಿನಾಂಕ 11.06.2003 ಸಂಖ್ಯೆ ಆಇ/572/ವೆಚ್ಚ 5/2003ರ ಅನಧಿಕೃತ ಟಿಪ್ಪಣಿಯಲ್ಲಿ ಆರ್ಥಿಕ ಇಲಾಖೆಯ ಸಹಮತಿಯೊಂದಿಗೆ ಈ ಪತ್ರವನ್ನು ಹೊರಡಿಸಲಾಗಿದೆ) ಮತ್ತು ಇಡಿ 28 ಕೆವಿವಿ 2004 ಬೆಂಗಳೂರು ದಿನಾಂಕ:24.01.2005 ಗಳ ಪ್ರಕಾರ ಬೆಂಗಳೂರು ವಿಶ್ವವಿದ್ಯಾಲಯದಿಂದ ನಿವೃತ್ತಿ ವೇತನ ವಂತಿಗೆಯನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ವರ್ಗಾಹಿಸಿಕೊಂಡು, ಬೆಂಗಳೂರು ವಿಶ್ವವಿದ್ಯಾಲಯ ಮತ್ತು ಕನ್ನಡ ವಿಶ್ವವಿದ್ಯಾಲಯಗಳ ಒಟ್ಟು ಸೇವೆ 23 ವರ್ಷಗಳನ್ನು ಗಣನೆಗೆ ತೆಗೆದುಕೊಂಡು ನಿವೃತ್ತಿ ವೇತನದ ಸೌಲಭ್ಯಗಳನ್ನು ಲೆಕ್ಕಚಾರ ಮಾಡಿ ಪಾವತಿಸಲಾಗಿದೆ.<br>ಈ ರೀತಿಯಾಗಿ ಸರ್ಕಾರದ ಸಹಮತಿಯೊಂದಿಗೆ ನಿವೃತ್ತಿ ವೇತನ ಪಾವತಿಸಲಾಗಿದೆ. ಯಾವುದೇ ಲೋಪವಾಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಕಂಡಿಕೆ ಕೈ ಬಿಡಲು ಕೋರಲಾಗಿದೆ. | | |



PDF created with pdfFactory trial version www.pdffactory.com

| | | | | |
|---|---|---|---|---|
| | ಮುಖ್ಯಗ್ರಂಥಪಾಲಕರು, ಇವರಿಗೆ ನಿವೃತ್ತಿ ವೇತನ ನೀಡಿರುವುದು ಕೆ.ಸಿ.ಎಸ್.ಆರ್. ಹಾಗೂ ಕನ್ನಡ ವಿಶ್ವವಿದ್ಯಾಲಯ ಪರಿನಿಯಮಗಳಿಗನುಗುಣವಾಗಿರುವುದಿಲ್ಲ. ಆದಕಾರಣ ನಿಯಮಬಾಹಿರವಾಗಿ ಇತ್ಯರ್ಥಪಡಿಸಿದ ಸದರಿ ಪಿಂಚಣಿ ಪ್ರಕರಣದ ಬಗ್ಗೆ ಆಡಳಿತಾತ್ಮಕ ಕ್ರಮ ಕೈಗೊಳ್ಳಲು ಸೂಚಿಸಲಾಗಿರುತ್ತದೆ. | | | |
| 32 | **ನಿರುಪಯುಕ್ತ ವಹಿ ಹಾಜರುಪಡಿಸದಿರುವುದು.**<br>ಹಿಂದಿನ ಲೆಕ್ಕ ತನಿಖಾ ವರದಿ ಕಂಡಿಕೆ 52ರಲ್ಲಿ ತಿಳಿಸಿದಂತೆ ಪ್ರಸಕ್ತ ಸಾಲಿನ ಲೆಕ್ಕ ತನಿಖೆಗೆ ನಿರುಪಯುಕ್ತ ವಹಿಯನ್ನು ನಿರ್ವಹಿಸಿ ಹಾಜರುಪಡಿಸಿಲ್ಲ. | ನಿರುಪಯುಕ್ತ ವಹಿಯನ್ನು ನಿರ್ವಹಿಸಲಾಗಿದೆ. ಮುಂದಿನ ಲೆಕ್ಕ ತನಿಖೆಗೆ ಹಾಜರಪಡಿಸಲಾಗುವುದು. | | |
| 33 | **ಸ್ತಿರಾಸ್ಥಿವಹಿ ಬಗ್ಗೆ**<br>2009-10ನೇ ಸಾಲಿನ ಲೆಕ್ಕ ತನಿಖೆಗೆ ವಿಶ್ವವಿದ್ಯಾಲಯ ಹೊಂದಿರುವ ಸ್ತಿರಾಸ್ಥಿಗಳನ್ನು ಸ್ತಿರಾಸ್ಥಿವಹಿಯಲ್ಲಿ ನಿರ್ವಹಿಸಲಾಗಿದೆ. ಸದರಿ ವಿವರಗಳನ್ನು ಈ ವರದಿಯ ಅನುಬಂಧ 6ರಲ್ಲಿ ಲಗತ್ತಿಸಲಾಗಿದೆ. | - | | |
| 34 | **ಚರಾಸ್ತಿವಹಿ ಬಗ್ಗೆ**<br>2009-10ನೇ ಸಾಲಿನ ಲೆಕ್ಕ ತನಿಖೆಗೆ ವಿಶ್ವವಿದ್ಯಲಯ ಹೊಂದಿರುವ ಚರಾಸ್ತಿ ವಹಿಯನ್ನು ಪರಿಶೀಲಿಸಲಾಗಿದೆ. ಸದರಿ ಚರಾಸ್ತಿವಹಿಯಲ್ಲಿದ್ದ ವಿವಿಧ ಕಟ್ಟಡಗಳಲ್ಲಿನ ಉಪಯುಕ್ತ ಹಾಗೂ ನಿರುಪಯುಕ್ತ ಚರಾಸ್ತಿಗಳ ವಿವರಗಳನ್ನು ಅನುಬಂಧ 7ರಲ್ಲಿ ಲಗತ್ತಿಸಿದೆ. | - | | |
| 35 | **ಲೆಕ್ಕ ತನಿಖಾ ಶುಲ್ಕದ ಬಗ್ಗೆ**<br>ಕನ್ನಡ ವಿಶ್ವವಿದ್ಯಾಲಯದ 2009-10ನೇ ಸಾಲಿನ ಲೆಕ್ಕ ತನಿಖೆಯನ್ನು ಈ ಕೆಳಗಿನಂತೆ ಒಟ್ಟು 6 ಜನ ತನಿಖಾ ಸಿಬ್ಬಂದಿಯಿಂದ ದಿನಾಂಕ 06-09-2010ರಿಂದ 29-10-2010ರ ವರೆಗೆ ಒಟ್ಟು 145 ಮಾನವ ದಿನಗಳನ್ನು ಉಪಯೋಗಿಸಿ ಕೈಗೊಳ್ಳಲಾಗಿದೆ. ಸದರಿ ಅವಧಿಯಲ್ಲಿ ತನಿಖಾ ಸಿಬ್ಬಂದಿಯು ಪಡೆದ ವೇತನ ಮತ್ತು ಪ್ರಯಾಣ ಭತ್ಯೆಗಳ ಮೊತ್ತ ರೂ.132172-00ಗಳನ್ನು | ಲೆಕ್ಕ ತನಿಖಾ ಶುಲ್ಕ ರೂ.132172/-ಗಳನ್ನು ಸರಕಾರದ ಲೆಕ್ಕಶೀರ್ಷಿಕೆಗೆ ಜಮೆ ಮಾಡಲಾಗಿದೆ.<br>ಚಲನ್ ನಂ:131 ದಿನಾಂಕ:17.02.2012ರಂದು<br>ಸರ್ಕಾರದ ಲೆಕ್ಕ ಶೀರ್ಷಿಕೆಗೆ ಜಮೆ ಮಾಡಲಾಗಿದೆ. | | |



PDF created with pdfFactory trial version www.pdffactory.com

<table>
<tr>
<td></td>
<td>
ತನಿಖಾ ಶುಲ್ಕವಾಗಿ ಲೆಕ್ಕಚಾರ ಮಾಡಲಾಗಿದೆ. ಸದರಿ ಮೊತ್ತವನ್ನು ಲೆಕ್ಕ ಶೀರ್ಷಿಕೆ 0070–60110–0–01 ಆಡಿಟ್ ಚಾರ್ಜಸ್‌ಗೆ ಸಂದಾಯ ಮಾಡಲು ಸೂಚಿಸಿದೆ.
<table>
<tr><th>ಸಿಬ್ಬಂದಿ ಹೆಸರು</th><th>ಮಾನವ ದಿನಗಳು</th><th></th><th>ವೇತನ</th><th>ಪ್ರಯಾಣ ಭತ್ಯೆ</th><th></th><th>ಒಟ್ಟು</th></tr>
<tr><th></th><th>8/10</th><th>10/10</th><th></th><th>9/10</th><th>10/10</th><th></th></tr>
<tr><td>ಲೆಕ್ಕಪರಿಶೋಧನಾಧಿಕಾರಿ(A.S</td><td>16</td><td>12</td><td>25779</td><td>1931</td><td>1601</td><td>29311</td></tr>
<tr><td>ಲೆಕ್ಕಪರಿಶೋಧನಾಧಿಕಾರಿ(PVB)</td><td>16</td><td>11</td><td>16989</td><td>1923</td><td>1430</td><td>20344</td></tr>
<tr><td>ಲೆಕ್ಕಪರಿಶೋಧನಾಧಿಕಾರಿ(VKT)</td><td>16</td><td>–</td><td>23268</td><td>1984</td><td>–</td><td>25252</td></tr>
<tr><td>ಲೆಕ್ಕಪರಿಶೋಧನಾಧಿಕಾರಿ(RS)</td><td>10</td><td>12</td><td>19880</td><td>1320</td><td>1844</td><td>23044</td></tr>
<tr><td>ಲೆಕ್ಕಪರಿಶೋಧನಾಧಿಕಾರಿ(LL)</td><td>12</td><td>12</td><td>13270</td><td>1185</td><td>1365</td><td>15820</td></tr>
<tr><td>ಲೆಕ್ಕಪರಿಶೋಧನಾಧಿಕಾರಿ(Babu)</td><td>14</td><td>14</td><td>15749</td><td>1371</td><td>1281</td><td>18401</td></tr>
<tr><td>ಒಟ್ಟು</td><td>84</td><td>61</td><td>114935</td><td>9716</td><td>7521</td><td>132172</td></tr>
</table>
</td>
<td></td>
<td></td>
<td></td>
</tr>
<tr>
<td>36</td>
<td>
ಸಾಮಾನ್ಯ ಅಭಿಪ್ರಾಯ<br>
ಬಹಳಷ್ಟು ದಿನಗಳ ಹಿಂದಿನ ಮುಂಗಡಗಳನ್ನು ಹೊಂದಾಣಿಕೆ ಮಾಡಿಸಲು ಅಥವಾ ವಸೂಲಿಸಲು ಕ್ರಮ ತೆಗೆದುಕೊಳ್ಳುವುದು ಅವಶ್ಯಕ ಮೊದಲನೇ ಮುಂಗಡ ಹೊಂದಾಣಿಕೆಯಾಗದೇ ಎರಡನೇ ಮುಂಗಡ ಮಂಜೂರು ಮಾಡಕೂಡದು ಎಂದು ಅಭಿಪ್ರಾಯ ನೀಡಲಾಗಿದೆ. ಕೆ.ಸಿ.ಎಸ್.ಆರ್.ನಿಯಮಾವಳಿಯಂತೆ ಪ್ರಯಾಣ ಭತ್ಯೆ ಕ್ಲೇಮುಗಳನ್ನು ಹತ್ತಿರದ ಮತ್ತು ಅಗ್ಗದ ದರದಲ್ಲಿ ಕ್ಲೇಮು ಮಾಡುವುದು ಸೂಕ್ತ ಎಂದು ಅಭಿಪ್ರಾಯ ನೀಡಲಾಗಿದೆ. ಲೆಕ್ಕ ತನಿಖೆಗಾಗಿ ಓಚರುಗಳನ್ನು ಹಾಗೂ ಲೆಕ್ಕ ಪತ್ರಗಳನ್ನು ಕ್ರಮಬದ್ಧವಾಗಿ ನಿರ್ವಹಿಸಿ ಹಾಜರುಪಡಿಸುವುದು ಅವಶ್ಯಕ ಲೆಕ್ಕಪತ್ರಗಳ ನಿರ್ವಹಣೆಯಲ್ಲಿ
</td>
<td>ಓಚರ್‌ಗಳನ್ನು ಕ್ರಮಬದ್ಧವಾಗಿ ಮತ್ತು ದಾಖಲೆ ಪತ್ರಗಳನ್ನು ಸೂಕ್ತವಾಗಿ ಲೆಕ್ಕಶೀರ್ಷಿಕೆವಾರು ನಿರ್ವಹಿಸಲಾಗಿದೆ.</td>
<td></td>
<td></td>
</tr>
</table>



PDF created with pdfFactory trial version www.pdffactory.com

| | | | | |
|---|---|---|---|---|
| | ಸುಧಾರಣೆಯಾಗಬೇಕು. | | | |

**ಸಹಾಯಕ ನಿಯಂತ್ರಕರು**
ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ
ಬಳ್ಳಾರಿ



PDF created with pdfFactory trial version www.pdffactory.com